ಶ್ರೀ.

ಾರನಹಳ್ಳಿ ಅನಂತರಾಯ. ವ್. ಏ.

ಇವರ

ಕಾವ್ಯ-ಕಲ್ಪ.

೧೯೨೮.

Printed by Mr. M. V. Godbole at his
tral Printing Press" Karwar and published
author, at Karwar.

ಶ್ರೀ.

ಹಾರನಹಳ್ಳಿ ಅನಂತರಾಯ. ಎಮ್. ಏ.

ಇವರ

ಕಾವ್ಯ-ಕಲ್ಪ.

೧೯೨೮.

ನಿವೇದನೆ.

ಕಡೆಯವೆರಡು ಕೃತಿಗಳನ್ನುಳಿದು ಎಲ್ಲ ಕವಿತೆಗಳೂ ಈ ಮೊದಲೇ ಬೇರೆ ಬೇರೆ ಮಾಸಿಕ ಪುಸ್ತಕಗಳಲ್ಲಿ ಪ್ರಕಟವಾಗಿ ಸಾಹಿತ್ಯಪ್ರಿಯರ ದೃಷ್ಟಿಪಥದಲ್ಲಿ ಬಂದು ಹೋದುದು ನಿಜ. ಆದರೂ ಅವೆಲ್ಲವುಗಳನ್ನು ಒಂದೆಡೆಗೆ ಕಲೆಹಾಕಿ ಮತ್ತೊಮ್ಮೆ ಸಾಹಿತ್ಯ ಕೋವಿದರಿದಿರಿಗಿಡುವ ಉದ್ದೇಶದಿಂದ ಈಗ ನಾನು ಪ್ರಯತ್ನ ಮಾಡಿರುವೆನು. ಕವಿತೆಯು ಹಳೆಯದೆಂದು ಹಳಿಸುವುದಿಲ್ಲ, ಹೊಸದೆಂದು ಹುಳಿಸುವುದಿಲ್ಲ; ಆದ ಕಾರಣ ಸಾಹಿತ್ಯಸೇವಕರ ಸೇವೆಗಾಗಿ ನನಗೆ ಲಭ್ಯವಾದ "ಕಾವ್ಯಕಲ್ಪ" ವನ್ನು ಅರ್ಪಿಸಿರುವೆನು. ಇದರಿಂದ ಸಂತುಷ್ಟರಾದವರಲ್ಲಿಯೂ ವಿತುಷ್ಟರಾದವರಲ್ಲಿಯೂ ಸಾಹಿತ್ಯಾಭಿರುಚಿಯು ಮಾತ್ರ ಸಂತತವಾಗಿ ಸಂವರ್ಧಿಸಲೆಂದು ಸರ್ವೇಶನನ್ನು ಬೇಡಿಕೊಳ್ಳುವೆನು.

ಕಾರವಾರ,
೧-೫-೧೯೩೮.

ಹಾರನಹಳ್ಳಿ ಅನಂತರಾಯ.

ಕಾವ್ಯಕಲ್ಪ.

॥ ಸಿರಿಗನ್ನಡಂ ಗೆಲ್ಗೆ ॥



೧.

ಗಣಪತಿ ಸ್ತವನ.

[ಈ ಕವಿತೆಯು "ವಿದ್ಯಾರ್ಥಿ" ಎಂಬ ಮಾಸಿಕ ಪುಸ್ತಕದಲ್ಲಿ ಪ್ರಕಟವಾಗಿತ್ತು. ಈ ಕವಿತೆಯಲ್ಲಿ ಗಣಪತಿಯ ಸ್ತೋತ್ರವು ವೃದ್ಧಾಚಾರವನ್ನು ಅನುಸರಿಸಿ ಇರುತ್ತದೆ. ಗಣಪತಿಯು ಮೂರ್ತಿಯೆಂದರೆ ಕೇವಲ ವೇದದಲ್ಲಿ ಹೇಳಿದ ಪರಮತತ್ವದ ಮೂರ್ತಿಯೆಂದೇ ಭಾವನೆಯು.]

ಉದರದೊಳ್ಪದಿನಾಲ್ಕು ಲೋಕಮಂ ಸಲೆಯಿರಿಸಿ ।
ವದನದೊಳ್ಮಿಸುಪೊಂದೆ ದಂತಮಂ ತೋರುತಂ ।
ತ್ರಿದಶವಂದಿತ ಮಂಗಳಾಂಗದೊಳು ಜಂಕಾರಮದು ತಾನೆ
ಮೂಡಿರುತಿರೆ ॥
ಒದವಿರ್ದ ಮಾಯೆಯಿಂ ಮುಸುಕಿರ್ದ ಮನುಜರ್ಗೆ ।
ಹೃದಯಗತವಹುದೆಂದು ವರಪರಮ ತತ್ವಸೇ¹ ।
ಪದುಳದೊಳ್ ಮೈಗೊಂಡು ಭವಬಾಧೆಯಂ ಸದೆವ
ವ್ರತಗೊಂಡುದುದು ಭಾಗ್ಯವೈ ॥ ೧ ॥

---

1. ವೇದದಲ್ಲಿ ಪ್ರಣೀತವಾದ ಜ್ಞಾನ.

೨. ಗಣಪತಿ ಸ್ತವನ.

ನೊಸಲೊಳೆಸೆದೇಳ್ವ ಬಾವನ್ನದಾ ಗಂಪು ವರ- ।
ರಸಪೂರ್ಣ ತಾಂಬೂಲಮಂ ಮೆದ್ದ ಮೊಗದುಸಿರು ।
ಪಸರಿಸಿದ ತಿಂಗಳೊಳ್ಬೆಳೆದ ಬೆಳ್ದಾವರೆ[2]ಗಳಿಂದೊಪ್ಪುವಾ ಕರಗಳ ॥
ಕುಸುಮ ಪರಿಮಳವು ನವವಸನದಾ ಸುರಭಿ ಮೇಣ್ ।
ವಿಶದಾಂಗದಾ ಬೆಮರ ಸೊಗಸು[3] ತೆರೆಮುಸಗಿ[4] ಮಿಗೆ ।
ಹೊಸೆದ ಕತ್ತಲೆಯ ಜಡೆ ಸಂದಣಿಯ ತೆಕ್ಕೆ[5] ಮನಕಮಿತ
ಭಕ್ತಿಯ ಸಾರ್ವುವು ॥ ೧ ॥

ಭುವನದೊಳ್ಗಣಪತಿಯೆ, ನಿನ್ನನತಿಚಿತ್ರಗೌ- ।
ರವದ ವಿಗ್ರಹದೆ ಪೂಜಿಸುತಿಹರು ಸಂತತಂ ।
ಭವಸಂಕಟಂಗಳಿಂ ಕೊರಗಿ ನಿನ್ನೊಳು ಭಾವಿಸಿದರಲ್ತೆ
ವಿಘ್ನಾಂತಮಂ ॥
ಕವಲವಿಲ್ಲದೆ ಮನದೆ[6] ನಿನ್ನ ಸೇವಿಸುವ ಮಾ- ।
ನವರಿಂಗೆ ಧೈರ್ಯ-ಸಾಹಸ-ಶಕ್ತಿ ಗುಣಗಳಂ ।
ಜವದಿಂದ ಪೂರೈಸಿ ಕೆಲಸಮಂಗೆಲಿಸೆಲ್ಪೈ ಶುಭಕಾರಿ
ಹೇರಂಬನೇ ॥ ೨ ॥

---

2. ಬೆಳದಿಂಗಳಲ್ಲಿ ಬೆಳೆದ ಬಿಳಿಯದಾವರೆಗಳು ದೇವರ ಕೈಯಲ್ಲಿರಲು ಅತಿಶಯ ಯೋಗ್ಯವಲ್ಲವೇ? 3. ಪುಣ್ಯವಂತರ ಬೆಮರೇ ಸುವಾಸಯುಕ್ತವಿರುವುದೆಂಬ ಪ್ರವಾದವಿದ್ದ ಮೇಲೆ ದೇವರ ಬೆಮರಾದರೂ ಅದಕ್ಕೂ ಹೆಚ್ಚು ಸುವಾಸಿಕವಿರುವುದು ಶಕ್ಯವಿರುವುದಲ್ಲವೇ? 4. ವಿಶೇಷವಾಗಿ. 5. ದಟ್ಟವಾಗಿದ್ದ ಕರ್ರನ್ನ ಕೂದಲದ ಸಮೂಹದ ಕೂಡ. 6. ಏಕ ಚಿತ್ತದಿಂದ.

೨.

ಕೋಗಿಲೆ.

[ಇದಾದರೂ "ವಿದ್ಯಾರ್ಥಿ" ಯಲ್ಲಿಯೇ ಪ್ರಕಟವಾಗಿತ್ತು. ಕೋಗಿಲೆಯ ಸ್ವರವನ್ನು ಮನಸ್ಸುಗೊಟ್ಟು ಕೇಳಿದವನಿಗೆ ಆನಂದವಾಗದೇ ಎಂದೂ ಇರದು. ಕೋಗಿಲೆಯ ಸ್ವರದಿಂದ ಮನಸ್ಸಿನಲ್ಲಿ ಹುಟ್ಟಿದ ನಾನಾ ಕಲ್ಪನೆಗಳನ್ನು ಈ ಕವಿತೆಯಲ್ಲಿ ನಾನು ವರ್ಣಿಸಿರುವೆನು; ಇನ್ನು ವರೆಗೂ ಹೀಗೆಯೇ ನನಗೆ ಕಲ್ಪನೆಗಳು ಬರುವುವು. ಕೋಗಿಲೆಯು ಗಾನದಲ್ಲಿ ಲೋಲನಾದ ಕಾಲದಲ್ಲಿ ಹೊರಟ ಈ ಉದ್ಗಾರಗಳನ್ನೆಲ್ಲ ನಾನು ಕೋಗಿಲೆಯ ಉದ್ಗಾರವೆಂದೇ ತಿಳಿದುಕೊಂಡಿರುವೆನು. ಈ ಕವಿತೆಯನ್ನು ಮಂಜುಭಾಷಿಣಿ ವೃತ್ತದಲ್ಲಿ ಬರೆದಿದೆ.]

ಚಲುವಾದ ರಾಣಿಯುಷೆ ಬರ್ಪ ಕಾಲಮುಂ ।
ಕಲಗಾನದಿಂದುಲಿವ ಬಂದಿಯೆಂಬವೊಲ್ ॥
ನಲುವಿಂದೆ ನಿನ್ನ ದನಿಗೂಡಿ ಕೋಗಿಲೆ ।
ಸುಳಿವಂ ಸಮೀರ ನಿಳೆಯಂ ಪ್ರಭಾತದೊಳ್[1] ॥ ೧ ॥
ಅರುಣಂ ದಿನೋದಯದಿ ಶೋಭಿಸಂ ವಲಂ ।
ಮರುತಂ ಸದಾ ಸೊಗಮನೈದಿಪಂ ಕರಂ ॥
ಧರೆ ಪುಷ್ಪಗಂಧವನು ತಾಳ್ದು ರಂಜಿಪಳ್ ।
ತುರುಗಿಪ್ಪ ನಿನ್ನ ಮೃದುಗಾನದಿಂ ಸಖೀ ॥ ೨ ॥
ಗಗನಾಂಗಣಂ ಘನ ನಿನಾದ ಭೀಕರಂ ।
ನೆಗೆದುಗ್ಗಿ ಭೋರ್ಗರೆವ ಸಿಂಧು ಭೀಕರಂ ॥
ಹಗುರಾಗಿ ಬೀರೆ ಪವಮಾನ ನಿನ್ನಯಾ ।
ಸೊಗಯಿಪ್ಪ ನುಣ್ಚರವ ಭೂಮಿ ರಮ್ಯಳು ॥ ೩ ॥

---

1. ಉಷೆಗೆ ಭಟ್ಟಂಗಿಯಾಗಿ ಮುಂಜಾವಿನ ತಂಗಾಳಿಯು ಕೋಗಿಲೆಯ ಧ್ವನಿಯು ಮುಖಾಂತರವಾಗಿ ಅವಳನ್ನು ಹೊಗಳುವನು, ಎಂಬುದೇ ಇದರ ಭಾವವು.

ಅಜವಾಣಿಯರ್ ಸುರರಿಗೀವ ಗಾಡಿಯುಂ[2] ।
ನಿಜವಾಣಿಯಿಂ ಬಗೆವ ಗಾನಲೋಲಳೇ ॥
ಭಜಿಸುತ್ತೆ ನಿನ್ನದಹಿಯುಂ ನರೋತ್ತಮರ್ ।
ಸೃಜಿಪರ್ ವಿಲಾಸಕೃತಿಯುಂ ವಿನೋದಿಪರ್ ॥ ೪ ॥

ವಿರಹಾರ್ತನೀಕ್ಷಿಪನು ತನ್ನ ನಲ್ಲಳಂ ।
ಸರಮುಂ[3] ವಿಹಾರವಿಧಿಯುಂ ವಿಳೋಕಿಪಂ ॥
ವಿರತಂ[4] ಜಗದ್ಗುಣವಗಾಣ್ಬಪಂ ನಿಜಂ ।
ಪರಪುಟ್ಟಳೋತುಲಿವ ನುಣ್ಚರಂಗಳೊಳ್ ॥ ೫ ॥

ಎಳೆನೇಸರೇಳುತೆ ದಿಗಂತ ಭೂಮಿಯುಂ ।
ಕಳೆಯ್ವೈದಿಸೀಯೆ ಪೊಸ ಪೊಚ್ಚಸೀರೆಯುಂ ॥
ತಳೆದಂದ ವನ್ನವಳೆ ಬಣ್ಣಿಪಂತೆವೋಲ್ ।
ಬಳೆದಿರ್ಪುದೈ ಗೆಳತಿ ನಿನ್ನ ವಾಣಿಯುಂ[5] ॥ ೬ ॥

ಸಿರಿಯುಳ್ಳರಾಳ್ವಮಿಪ ತೋಂಟವೆತ್ತಣಂ ।
ಧರೆಯಾಣ್ಮರೂರಿದ ಬನಂ ಸಮೀಪದೊಳ್ ॥
ಮೆರೆದಪ್ಪುದೇನಿಹುದೆ ಭೋಗಭೂಮಿಯುಂ ।
ಪರಪುಟ್ಟಳೇಕುಲಿವಳಿಂತು ಚೆಂದದಿಂ ॥ ೭ ॥

ಕೊನರ್ದ[*]ಂದವಾದ ಬನಸಾಲ್ಮರಂಗಳಂ ।
ತನಿವಣ್ಗಳುಳ್ಳ ತರುಗುಲ್ಮಮುಂ ಸಮೀ ॥

---

2. ವಿನೋದ ವಿಲಾಸಾದಿಯು. 3. ಹೆಂಡತಿಯನ್ನು ಕೂಡಿಕೊಂಡಿದ್ದವನು. 4. ವಿರಕ್ತ. 5. ಹೊಸ ಉತ್ಸಾಹ ಹೊಸ ಸೀರೆಯಿಂದ ಆನಂದಬಟ್ಟ ಭೂಮಿಯು ತನ್ನ ತರಹವನ್ನು ಹೊಗಳುವಂತೆ ಕೋಗಿಲೆಯು ಕೂಗಿತು.

ರನ ಕಾಲ್ಗೆಡಿಪ್ಪಲರ್ದ[*] ಬಳ್ಳಿವಳ್ಳಿಯುಂ ।
ಘನವರ್ಣೆ ನಿನ್ನದನಿ ತೋರ್ಪುದೆತ್ತಲುಂ ॥ ೮ ॥
ನನೆವಿಲ್ಲ[6]ಕೈವನೆ ವೊಲಿರ್ಪ ನೀರಜೋ-
ದ್ಭವನಮುಂ ವನೇಶ್ವರಿಯ ಹಾಸು ಗನ್ನಡಿಂ ॥
ದೆನುವಂತೆ ರಂಜಿಪ ವಿಹಾರಕೂಪಮುಂ ।
ಘನವರ್ಣೆ ನಿನ್ನ ದನಿ ತೋರ್ಪುದೆತ್ತಲುಂ ॥ ೯ ॥
ಇನಿಯೋಪರಕ್ಕರದ ಸೊಲ್ಲ ಸೊಲ್ಲಿಗುಂ ।
ತೊನೆವಂತೆ ತೀಡೆಸೆವ ಮಂಡಪಂಗಳಂ ॥
ಮನಸೋಲ್ದ ಕಾಮಿಗರೆಯಲ್ತ ವೆಣ್ಗಳಂ[7] ।
ಘನವರ್ಣೆ ನಿನ್ನ ದನಿ ತೋರ್ಪುದೆತ್ತಲುಂ ॥ ೧೦ ॥
ಬನರಾಣಿ ತೊಟ್ಟೆಸಕದಂತೆ ನಾದಮುಂ ।
ಜನಗುತ್ತೆ ವಾರುವರವಕ್ಕೆ ಹಿಂಡಿನಿಂ ॥
ಬಿನದಂ ನಿಮಿರ್ಚೆ ಅವಳೊಂದ ಗಾನಮಂ ।
ಘನವರ್ಣೆ, ನಿನ್ನ ದನಿ ತೋರ್ಪು ದೆತ್ತಲುಂ[8] ॥ ೧೧ ॥
ಕನಕಾಭೆಯುಂ ಪಡೆದ ಜಾವದೊಳ್ಗೊಳಂ ।
ಮಿನಗುತ್ತಮಿರ್ಪ ಜಳಪಕ್ಕಿ ಸಾಲ್ಗಳಾ ॥

---

6. ಕಾಮನ ಬತ್ತಳಿಕೆ. 7. ವಿರಹದಿಂದ ಮತ್ತನಾದವನಿಗೆ ಉದ್ಯಾನದಲ್ಲಿರುವ ಕಲ್ಲಿನ ಹೆಣ್ಬೊಂಬೆಗಳು ಕೂಡ ಸಜೀವವಾದ ಹೆಣ್ಣುಗಳಂತೆ ತೋರುವುವು. 8. ಕೋಗಿಲೆಯು ಅನಂದವು ಭೂಮಿಗಿಟ್ಟ ಆಭರಣದ ಸಪ್ಪುಗಳಿಂದಿದ್ದ ಅರವಕ್ಕೆಯು ಧ್ವನಿಯಿಂದ ಉಂಟಾಗಿರಬಹುದು.

ಗೂನೆಮುಕ್ತಸಾಂತ ಕಟಿಸೂತ್ರಮೆಂಬುದಂ ।
ಘನವರ್ಣೆ ನಿನ್ನ ದನಿ ತೋರ್ಪುದೆತ್ತಲುಂ[9] ॥ ೧೨ ॥
ಬರಿದಾಯ್ತು ಭೋಗಮದು ರಮ್ಯಭೂಮಿಯುಂ ।
ಬರದಾಯ್ತು ಕಾಮಿಜನಚಿತ್ತ ಕುತ್ಸವಂ ॥
ಕಿರಿದಾಯ್ತು ರಂಜನದ ಪಾಂಗುವೆತ್ತಲಿಂ ।
ನ್ನಿರದಾಯ್ತು ನಿನ್ನ ರವ ಕೆಂತುಟಿಂ ಬಿಲೆ ॥ ೧೩ ॥

---

9. ಭೂದೇವಿಯ ಡಾಬಿನಂತಿರುವ ಕೊಳದ ಸುತ್ತಲೂ ಇರುವ ನೀರ ಹಕ್ಕಿಗಳು ಡಾಬಿನ ಮುತ್ತಿನ ಗೊಂಚಲದಂತೆ ಕಂಡುವು.

ದ್ವೇಷಭಾಂಡಾರ ನಾಟಕದೊಳಗಿನ ಪದ.

ರಾಗ ಭೂಪ. “ ನಮನ ತೇ ಶರಣ ” ಎಂಬಂತೆ.

॥ ಶ್ರೀ ॥ ನಮಿಪೆ ಸಿರಿ ವರನೆ ತವ ಚರಣ ವಾರಿಜಗಳಿಗೆ ।
ಕ್ಷೇಮಧಾಮನೆ, ಸಮಾಧಾನದಾಶಾ ॥ ಪ ॥
ಆದಿಮಧ್ಯಾಂತಾದಿ ರಹಿತ ನಿತ್ಯಾರ್ಭಕ ।
ವೇದಗೋಚರ ರೂಪ ಶಾಂತ ಚರಿತ ॥ ೧ ॥
ಲೋಕದಹಂಮತಾ ಪಾಪ್ಮಪಾಪಂಗಳ ।
ಸೋಂಕಸೀಂ ತೊಳೆವುತಾರಯಿಸು ತಾತಾ ॥ ೨ ॥

೩.

ಶೋಕ ಗೀತೆ.

ಈ ಕೃತಿಯು ಮೊದಲು "ಪ್ರಭಾತ" ವೆಂಬ ಕಾವ್ಯ ಮಾಸಿಕ ಪುಸ್ತಕದಲ್ಲಿ ಪ್ರಸಿದ್ಧವಾಗಿತ್ತು. ಮೊದಲನೆಯ ಬಾರಿ ಇನ್‍ಫ್ಲೂಯೆಂಝಾ ಬೇನೆಯು ಬಂದಾಗ ಸಣ್ಣ ಕೂಸುಗಳೂ ಹರೆಯ ಹೆಣ್ಣು ಮಕ್ಕಳೂ ಬಹು ಪ್ರಮಾಣದಿಂದ ಸಾಯಲಾಗಿ ಮನಸ್ಸಿಗೆ ಸಂತಾಪವಾಗಿ ಈ ಉದ್ಗಾರಗಳು ಹೊರಟುವು. ಈ ಕವಿತೆಯಲ್ಲಿ ಮೂರು ಭಾಗಗಳನ್ನು ಮಾಡಬಹುದು. ಮೊದಲನೆಯದರಲ್ಲಿ ಸಾವಿನ ಕಾರಣಗಳನ್ನೂ ಎರಡನೆಯದರಲ್ಲಿ ಸತ್ತವರಿಗೆ ಯಮನು ಹೇಗೆ ಆದರಸತ್ಕಾರ ಮಾಡಬೇಕೆಂಬುದನ್ನೂ ಕೊನೆಯ ಭಾಗದಲ್ಲಿ ಸತ್ತವರು ಇದ್ದವರ ಬಗ್ಗೆ ಮಾಡಿದ ಸತ್ಕಾರ್ಯಗಳನ್ನು ವರ್ಣಿಸಿರುವೆನು. ಮೊದಲನೆಯ ಭಾಗವು ತರ್ಕಬದ್ಧವಾಗಿದೆ; ಎರಡನೆಯದು ಕಾರುಣ್ಯಮಯವಾಗಿದೆ; ಕಡೆಯದು ಆನಂದಜನಕವಿರುತ್ತದೆ. ಕೊನೆಯವೆರಡೂ ಭಾಗಗಳು ನಿಜವಾಗಿ ಮನೋಹರವಾಗಿವೆಯೆಂದು ನನಗೆ ತೋರುತ್ತದೆ.]

ಯಮದೂತರ ಸೇನೆಯೊಳು ।
ಪ್ರಮುಖನು ತಾನೆನಿಸಿದೋರ್ವ ಮಾರನು[1] ಜಗದಿಂ ॥
ಶ್ರಮವಿಲ್ಲದೆ ಮಿತಿಯಿಲ್ಲದೆ ।
ಯಮಸದನಕ್ಕೈದಿಸುವನೆಂತೊ ನರರನ್ನಕಟಾ !! ॥ ೧ ॥

ನಾನಾರೂಪವ ತಳೆದಾ ।
ಸೇನಾನಿಯು[1] ಜನಸಮೂಹದೊಳ್ ಕಾದುತಿರಲ್ ॥
ತಾನಾಗಿ ಬಿಡುತನೇಕರ ।
ನೇನೋ[2]ಮಿಸನಹಹ ! ಸಕಲರನದಿದೆಸಿಬರನೊ ॥ ೨ ॥

---

1. ಸಿಡುಗು; ಇಲ್ಲಿ ಇನ್‍ಫ್ಲೂಎಂಝಾ ಬೇನೆಯೆಂದು ತಿಳಿಯಬೇಕು.

ಮಡಿದವರಂ ನೆನೆನಂತ್ರಹೆ- ।
ರಿಡೆ[2] ಬಳಲ್ವರ್ ತಮ್ಮ ಹಿತವು ನಿಂದುದಕೆಂಬಾ ॥
ನುಡಿಯಿಂ ಪ್ರೌಢರು ಗಳುಹುವ ।
ಬಡಿವಾರವನವರು ವೊಳ್ಳಿತೆಂಬರೆ ಪೇಳೆಂ ॥ ೩ ॥
ಜಗದಂತರಂಗವನರಿವ ।
ನಿಗಮವೆನಿಪ[3] ಕವಿ ಬಳಲ್ದು ಬೆಂಡಾಗುತಿರಲ್ ॥
ಬಗೆಗೆಟ್ಟ ಲೌಕಿಕಜ್ಞರು ।
ನಗುವರೊ ಮೇಣ್ ಭಯವ ಬಡುತ ಕಲ್ಲಾಗುವರೊ ॥ ೪ ॥
ಧರೆಯೊಳ್ ಪೆತ್ತಿಹ ಜನ್ಮದ ॥
ಕುರುಹುವಿದೆಂಬಂತೆ ಮಾಳ್ಪೆ ವಿನಿತಿನಿತೆನುವಾ ॥
ನರರೆಲ್ಲರಸುವ ಪೀರುವ ।
ದುರಂತಕ[4]ನಿಗೇಂ ಕೊಡುವುದೆ? ಧರ್ಮನ ಪೆಸರಂ ॥ ೫ ॥
ಬೊಮ್ಮನು ಪುಟ್ಟಿಪನೇತಕೆ? ।
ಸುಮ್ಮನೆ ಹರಿ ಬೆಳಿಪನೇಕೆ? ಚಿತ್ತಂಗಡುತಂ ॥
ಕೆಮ್ಮನೆ[5] ಶಿವನಾಗಾರದ ।
ದುಮ್ಮನರಪ್ಪ[6]ಳು ಮಕ್ಕಳಿಮ್ಮನು ಕೊಲುವರ್ ॥ ೬ ॥
ಅಲ್ಲಲ್ಲವು ಈ ನೀದೆಯು ।
ಸಲ್ಲದಿದುವಜಾಂಡವಾಳ್ವ ಸುರವರಂಗೆಲ್ಲೈ ! ॥
ಬಲ್ಲವರಾದೊಡೆ ನಮ್ಮೊಳೆ ।
ಸಿಲ್ಲಿಸುವಾ, ನರರೆ, ನಮ್ಮ ಸಾವಿನ ಕತಮಂ[7] ॥ ೭ ॥

2. ವಿಶೇಷವಾಗಿ. 3. ಜಗತ್ತಿನ ಗುಟ್ಟನ್ನು ತಿಳಿದು ನಿಶ್ಚಿತ ವಾಣಿಯಿಂದ ನುಡಿಯುವವನು. 4. ದುಷ್ಟ ಯಮ. 5. ನಿರರ್ಥಕವಾಗಿ. 6. ದುಷ್ಟರಾದ. 7. ಕಾರಣವನ್ನು.

ಧರ್ಮದ ಗುಣ ದೋಷಗಳ- ।
ನ್ನೊರ್ಮೆಯುಂ ಪರಿಕಿಸದೆ ನೀಚರಾಗಿರ್ಪಗಳ್ ॥
ಕರ್ಮವು ಕೆಡುತೆ ಬಲಿದು ಶಾಂ ।
ಕೂರ್ಮೆಯೊಳಿಂತೀವುದೆಂದು ಸುಜ್ಞರು ನುಡಿವರ್ ॥ ೮ ॥
ಸಿರಿಯಾಸೆಯುಂ ಸುಖದಾಸೆಯುಂ ।
ನೆರೆಯಿಸಿ ಲೋಕವನು ಬಿಜಯುಗೈವುವು ಯಮನೆಂ ॥
ಮರುಳ್ಗೈ ಜನವಿದು ಸತ್ಯಂ ।
ನಿರುತಂ ಕರುಣಾಳುವಿಂತು ಕೂಗುವನಲ್ತೇ ॥ ೯ ॥
ಬದುಕಿದ ಮಾನಿಸರೊಳಿತ- ।
ನ್ನೊದವಿಪ ಬಗೆ, ಗತವ ತಿಳಿಯೆ, ಕಾಣ್ಬಂ ಸತ್ಯಂ ॥
ನಿಧನಂ ಸುಂಗಿದ ಜೀವಿಗ- ।
ಳಧಮುಕ್ತಿಯಿಂ ಬೇಡಬಹುದೆ? ನಮ್ಮುನ್ನತಿಯಂ ॥ ೧೦ ॥
ಗಾಳಿಯೊಳುರಿಯುಂಡಯಿಸೆ[8] ಮೇಣ್ ।
ಬಾಳುವೆರ್ಚಿಲನನು[9] ಕಫವು ಬದಿಯಿಂ ಬಳಿಸಲ್ ॥
ತಾಳದೆ ತೊಳಲುವ ರೋಗಿಯು ।
ಗೋಳಿನ ನೆರಳಿಕೆಯುಂ ಯಮನ ಕಹಳೆಯು ಕೂಗೇ ॥ ೧೧ ॥
ಪುಟ್ಟುವುದುಳಿವುದು ಯುಳಿವುದು ।
ನೆಟ್ಟನೆ ನಿನ್ನಾಟವಿನ್ನು ಮರ್ತ್ಯರಧೀನರ್ ॥
ತೊಟ್ಟನೆ ನೀನುಳಿದವರಂ ।
ನಿಟ್ಟಿಪನಹನಾಗೆ ಸಾಯಲಟ್ಟುಳಿಯುಂಟೇಂ ? ॥ ೧೨ ॥
ಪಸುಳೆಯು ಪಾಸು ಜರೆಯು ಮೊರೆ ।

---

8. ವಾತಜ್ವರ, ಇನ್‌ಫ್ಲೂಎಂಝಾ ಬೇನೆಯುಂ ವಾತಜ್ವರದಿಂದ ಹುಟ್ಟುವುದೆಂಬ ಮತದ ಅನುವಾದವು. 9. ಹೃದಯವನ್ನು.

ಪೊಸ ಜವ್ವನ-ಜಂಲಗಳನು ಬೇಳ್ದಿ[10]ವು ದೇವಾ ! ॥
ದೇಸಿ[11]ಗರಾಪಾದೊಡೆಯುಂ ।
ಆಸಿಪೆವೈ ಬಂದವರನು ಕಾಯುವಿಯೆಂದೇ । ೧೩ ॥
ನಿನ್ನಯು ಮನೆ ಹಾದಿಯು ಕಡು ।
ಬನ್ನಕೆ ನೀನಿವರನೀಡುಮಾಡೆಲು ಬೇಡಾ ॥
ಮನ್ನಿಸಿ ನಿನ್ನಾಣೆಯ ನಿವ- ।
ರುನ್ನತರ್ಬೈ ಬಂದರೆಡಹಿ ತಮ್ಮುಮ್ಮಜ್ಜಗವುಂ ॥ ೧೪ ॥
ಯಮನಾಗಾರದ ಯಾತನೆ ।
ಸಮಂನಿಸಲ್ಕೆ ಶೀತಲೋಪಚಾರದ ಬಗೆಯಿಂ ॥
ಸುಮನರಿವರು ಸಾಂಸಾರಿಕ ।
ಯಮಯಾತನೆಯಲ್ಲಿ ಬೆಂದರಲ್ಲವೆ ದೇವಾ ! ॥ ೧೫ ॥
ಖಚರರ್ ಪಾಡಲಿ ಕುಣಿಯಲಿ ।
ಸುಚರಿತರಯ್ದುವರು ನಿನ್ನ ಮನೆ ಬಾಗಿಲುವುಂ ॥
ಪ್ರಚಲಿತಯಾಚನಶೋಚನ ।
ನಿಚಯದಿ ತಾನಾತ್ಮಘಾತಕೆಳಸದ ಸುಜನರ್ ॥ ೧೬ ॥
ಸಿನ್ನಾಲಯದೊಳ್ ಕೂಡಿದ ।
ಸನ್ನುತರೊಳ್ ನೆಲೆಸಿ ನೀಡು ಸಗ್ಗದ ಸೊಗವುಂ ॥
ಮುನ್ನಮೆ ಗತ-ತೇಜರ್ ಮ- ।
ತ್ತನ್ನೆಯದಿಂ ಕರ್ಮಭೂಮಿಗೆರವಾದರಿವರ್ ॥ ೧೭ ॥
ಬಿರಿಯಲಿ ಸತ್ತುಂ ಚಿತ್ತುಂ ।
ನೆರೆಯಲಿಯಾನಂದನಂತು ಪೆರ್ಚಲಿ ನಿತ್ಯಂ ॥

---

10. ಕೂಸುಗಳನ್ನೂ ಮುಪ್ಪಿನ ಹಾಗು ಪ್ರಾಯದ ಹೆಣ್ಣುಮಕ್ಕಳನ್ನೂ ಇಡುಕಿ ಕೊಟ್ಟಿವು. 11. ಅನಾಥರು.

ಪೆರ್ಚಿಯದ ಮಾಯೆಯ ನೀಗಿದ ।
ಶರಣರಿಗಿನಿತೊಂದು ದೊರೆವುದೇನಚ್ಚರಿಯೈ ? ॥ ೧೮ ॥

ಮಗುಳೆ ಜನಿಸರಿವರೆಲ್ಲಿಯುಂ ।
ಜಗದಘಸಂಜಾತಮಾರಶೋಧಿತಜೀವರ್ ॥

*ನೆಗಳ್ವರೆಮಗೆ ಸುಖಶಾಂತಿಯ ।
ಮುಗಿಲಲ್ಲಿಯೆ ಸುೞಿದು ದಿವ್ಯರೂಪ ಸಮೇತರ್ ॥ ೧೯ ॥

ಮೂರುಂ ತಾಪಕ್ಕನುವೆಂ ।
ದಾರುತ್ತಿಹ ಜನ್ಮದಿಂದೆ ಪಾರಾಗಿರ್ಪರ್ ।
ಧೀರೋನ್ನತರಂ ದೂಱುತೆ ।
ಘೋರಾಡದೆ ನೊಳ್ಪುದವರ ಸತ್ಕಾರ್ಯಗಳಂ ॥ ೨೦ ॥

ಹೊತ್ತಿದ ವೈರ[12]ವು ಮುಗ್ಗಿತು ।
ತೆತ್ತಿದವೈ ತಮ್ಮ ತಪ್ಪಿಗೆಲ್ಲವನಹಿತರ್ ॥
ಬಿತ್ತರಿಸಿತು ದಿಟದಾಳಿಕೆ ।
ಯೆತ್ತಲು ಪಿರಿದತ್ತು ಶಾಂತತಾಗಮಸಮಯಂ ॥ ೨೧ ॥

ಬಿತ್ತಿಗೆ ಬೆಳೆದಿತು ಮರಗಳ್ ।
ಪೆತ್ತುವು ತನಿವಣ್ಗಳನ್ನು ಬಿತ್ತಿದ ಸೆಲೆಗಳ್ ॥
ಮುತ್ತಸೊಸಿರ್ದುವು ಪಳವುಂ ।
ಸುತ್ತಲು ಪಸಿರಾಗೆ ಜೀಗಿಪುವವು ಮೃಗಖಗಗಳ್ ॥ ೨೨ ॥

ಈ ತೋರಣ ಮೀಬಾ[13]ಜನ ।
ಮೀ ತೋ[14]ರುಡೆಯುಂ ಸುಗಂಧ ಮಾಲ್ಯಾದಿಗಳುಂ ॥

---

12. ಕಳೆದ ಮಹಾಯುದ್ಧವು. (೧೯೧೪) 13. ವಾದನ.
14. ಉತ್ತಮವಾದ ವಸ್ತ್ರ.

ಈ ತಾಳ್ಮೆಯು ಮೀಯುಕ್ಕರು ।
ಮೇತರ್ಕೆಮಗೆಂಬ ಬೆತೆಯುಂ[15] ತೆಮರ್ದುದು ಸಟೆಯೇ ? ॥ ೨೩ ॥
ಭೂಮಿಯ ಮೋಹವ ತೊರೆದು ।
ವ್ಯೋಮದಿ ಸಂಚಾರಮಾಳ್ಪ ಭಾಸುರಸತ್ವರ್ ॥
ಕಾಮಿತವನಿಂತು ಸೈರಿಸುತೆ ।
ಪಾಮರರಂ ಪೊರೆವ ಪರಕೆ ಪೊತ್ತಿಹರಲ್ತೇ ? ॥ ೨೪ ॥
ಸಡೆಯುತೆ ಸದ್ಭಾವನೆಯ ।
ನ್ನೊಡರಿಸೆ ಸದ್ಬುದ್ಧಿಯಿಂದೆ ಕರ್ತವ್ಯಗಳಂ ॥
ಮುಡಿದಾ ಬಾಂಧವರನೊಡಂ ।
ಬಡಿಸುತೆ ಜಗದೀಶ ನೋವನನಿಶಂ ನಮ್ಮಂ[16] ॥ ೨೫ ॥

ದ್ವೇಷಭಾಂಡಾರ ನಾಟಕದೊಳಗಿನ ಪದ.

ರಾಗ: ಭೈರವಿ ಗಜಲ್. “ ರಾಮುಪ್ಯಾರಾ ಹೈ ಹಮಾರಾ ” ಎಂಬರೀತಿ.

ದೇಶಮಾತೇ ಹೇ ಪುನೀತೆ, ದೇವ ಮುನಿಮಾತೇ । ಸ್ವಮಾತೆ ।
ಜ್ಞಾನ ಪೂತೇ ಧರ್ಮಖ್ಯಾತೆ ಧಾನ್ಯಧನಭರಿತೇ । ಸ್ವಮಾತೆ ॥ ಪ ॥
ರಾಜದಾಸ ದೇವದಾಸ ಸ್ವರ್ಗವಾಸಾ ऽऽ । ವಶೇಷ ।
ಭೋಗತೋಷ ಮಾನಭೂಷ ಕೀರ್ತಿವೇಷಾ ऽऽ । ನಿಮೇಷ ॥ ೧ ॥
ದೇಶಸೇವೆ ಮಾತೃಸೇವೆ ದೇವ ದೇವೇ ऽऽ । ಶಸೇವೇ ।
ದೇಹಜೀವೇತ್ಯಾದಿ ಶಾವೇ ಪಾವನಂದಳೆವೇ । ಕಸೇವೆ ॥ ೨ ॥

---

15. ವ್ಯಥೆಯು. 16. ಕರ್ತವ್ಯವನ್ನು ಮಾಡುವುದೇ ಯಾವಾಗಲೂ ಶ್ರೇಯಸ್ಕರವಾದ ಮಾರ್ಗವು.

೪.

ಝಾರನ ಭಾವಚಿತ್ರವನ್ನುದ್ದೇಶಿಸಿ.

[ರಶಿಯಾ ದೇಶದ ಚಕ್ರವರ್ತಿಯಾದ ಝಾರನನ್ನು ಅವನ ಪ್ರಜೆಯು ತಳ್ಳಿ ಅವನನ್ನು ಒಂದು ಕಾರಾಗೃಹದಲ್ಲಿಟ್ಟಾಗ ಅವನು ಅಲ್ಲಿದ್ದ ಒಂದು ಬಡ್ಡಿಯ ಮೇಲೆ ಕುಳಿತು ಚಿಂತೆಯಲ್ಲಿ ಬಿದ್ದ ಹಾಗೆ ತೋರಿಸುವ ಒಂದು ಚಿತ್ರವನ್ನು ಯಾವುದೋ ಒಂದು ಇಂಗ್ಲೀಷ ಮಾಸಿಕ ಪುಸ್ತಕದಲ್ಲಿ ನಾನು ನೋಡಿದೆನು. ಚಿತ್ರದಲ್ಲಿ ಆ ದೀನ ಮೂರ್ತಿಯನ್ನು ನೋಡಿ ಅತಿಶಯ ದುಃಖವಾಗಿ ಈ ಕವಿತೆಯನ್ನು ಬರೆಯುವುದಾಯಿತು. ತನ್ನ ಗಂಡನಾದ ಝಾರನನ್ನು ಪೃಥ್ವಿಯು ಹೇಗೆ ಸಮಾಧಾನ ಮಾಡಬೇಕು ಮತ್ತು ಅವಳು ಹೇಗೆ ಮಾಡಿದಳು ಎಂಬ ವಿಷಯಗಳನ್ನು ವರ್ಣಿಸುವ ಭಾಗಗಳು ಈ ಕವಿತೆಯಲ್ಲಿ ಹೃದಯಂಗಮವಾಗಿವೆ. ಈ ಕೃತಿಯು ತರಳ ವೃತ್ತದಲ್ಲಿದೆ.]

ಗಣನೆವೊಂದಿದ ರಾಜಮಾಲೆಯೊಳಾಂತು ಕೀರ್ತಿಯ ನಾಮಗಂ ॥
ಚಣದೊಳಾದನೆ ಝಾರ ಕೀಳನು ತನ್ನ ದೇಶದವರ್ಗೆಯೇ ॥
ಸೆಣಸಿದ ಸ್ವಜನರ್ಗೆ ಶಾಂತತೆ ತೋರದಾದನೆ ಭೂಪನೇಂ ।
ತಣಿಯದಿರ್ದ ನರಾಧಮರ್ಗೆ ವಿಲಾಸವಾದನೆ ಮೇಣವಂ । ೧ ॥
ಜಲಧಿಯೊಳ್ಸಿಗದಾಯ್ತೆರನ್ನವು ತಾರೆ ಕತ್ತಲೆಬಾನೊಳೇಂ ।
ನೆಲದೊಳಂ ಸಿಗದಾಯ್ತೆ ಹೊನ್ನದು ಅಂತರಿಕ್ಷದಿ ಮೇಘ ತಾಂ ॥
ಅಲರಸೀಕ್ಷಿಸದಾಯ್ತೆ ನಂದನದೊಳ್ಕಪರ್ದಿ ಕುಬೇರನೊಳ್ ।
ನೆಲೆಸದಾಯ್ತೆ ನರೇಶಗೊಪ್ಪುವ ಸದ್ಗುಣಂ ಬಡ ಝಾರನೊಳ್ ॥ ೨ ॥
ಇಳಿದುದೇ ಹಣೆಮೇಲುಮೇರೆಯು ಪೋದುದೇ ಸಿರಿ ಕಣ್ಗಳಿಂ ।
ಸೆಳೆದುಕೊಂಡುವೆ ದೀರ್ಘಬಾಹುಗಳೇಂ ಧರಾಧಿಪ ರೇಖೆಗಳ್ ॥
ಉಳಿಸಿ ನಿಂತವೆ ಪರ್ಬಿದಿರ್ದೆ ಕುನುಂಗಿತೇ[1] ಸವೆದೈದುದೇ ।
ಕೆಳದಿಯ್ಮೆದಲೆ ಏಕೆ ಸತ್ಪ್ರಜೆ ಕೊಂದುದೋ ಬಡ ಝಾರನಂ ॥ ೩ ॥

---

1. ರಾಜಚಿಹ್ನವಾದ ಹರವಾದ ಎದೆಯು ಮುದುಡಿಕೊಂಡಿತೇ.

೧೪. ಝೂರನ ಭಾವಚಿತ್ರವನ್ನುದ್ದೇಶಿಸಿ.

ನೆರೆಸಿ ದೇಶವ ತುಂಬಿಕೋಶವನೂರಿಸನ್ನುತ ನೀತಿಯಂ ।
ತರಿದು ವೈರಿಯ ಕೂಡಿ ಮಿತ್ರರನೋವುತಂ ತಮನಾಡನ– ॥
ಕ್ಯರತೆಯಿಂ ಜನಕೆಲ್ಲ ವಿದ್ಯೆಯ ಪೇಳಿಬಲ್ಲಿ[2]ದರಂನೆಗ– ।
ಳ್ದರಸರಾ ಮನೆಯಲ್ಲಿ ಪುಟ್ಟಿದ ಸೀತನುಂ ಸುವಿನೀತನು ॥ ೪ ॥
ಉದಕಮಂ ಪೆಳಿವಂತೆ ಮೀನ್ಗಳು ಬಿಟ್ಟು ಝೂರನ ಓರಿಯಂ ।
ಸದೆದುದಕ್ಕವನನ್ನು ಸರ್ವರು ಗೆಲ್ವರೇ ನೃಪಭಾವವಮಂ ॥
ಮುದವದಾದರು ಸಿಕ್ಕು ಧನ್ಯತೆವೆತ್ತರೇ ಮತಿಗೆಟ್ಟವರ್ ।
ಒದವಿದಾಸೆ[3]ಲೆಯಿಕ್ಕೆ ಬಾವಿಯು ತಕ್ಕುದೇ ಸರಿ ಮುಚ್ಚಲು ॥ ೫ ॥
ಗಗನಮಂ ಕವಿದರ್ಕತೇಜವನೊತ್ತಿ ಮೋಡವ ತುಂಗವೃ– ।
ಕ್ಷಗಳು ಚಾಳಿಸೆ ಸೋರ್ವ ಸೀರ್ಪನಿಗಳ್ಗೆ ಮಂಜರಿವೃಂದವು ॥
ಒಗೆಯೆ ಶೋಭೆಯು ಪೊಚ್ಚ ಬಟ್ಟೆಯನುಟ್ಟು ಭೂಮಿಯು ತನ್ನಪ-।
ನ್ನಿಗನಿಗೆತ್ತಿದ ತೋರಮುತ್ತಿನ ಪಚ್ಚಸತ್ತಿಗೆ ಕಾಣ್ಬುದೈ[4] ॥ ೬ ॥
ಪ್ರಜಳ ಕೈ ಸೆರೆಯಾದ ಝೂರನಿಗಿಂತು ಯೋಜಿಸಿ ಛತ್ರಮಂ ।
ನಿಜ ಮನೋಹರನನ್ನು ಸಾಂತ್ವನಗೆಯ್ವ ನೀನಿಳೆ ಬೇಗದಿಂ ॥
ದ್ವಿಜಬಲಾರ್ಣವ ಘೋಷದಾದಿಯೊಳಿಟ್ಟು ಭೃಂಗಸುನಾದಮಂ ।
ಭುಜಗಗಮ್ಯಗತಿಜ್ಞ ಮಂಜುಲ ವಾಯುಚಾರನ ಓಡಿಸೌ[5] ॥ ೭ ॥
ಕಿನಿಸೆ ಕಂಪಿಸೆ ಭೂಪನಾಂ ತವೆ ನುಗ್ಗಿಪೆಂ ನರರೆಲ್ಲರಂ ।
ಮುನಿದು ಕೆಂಡವ ತೂರಿ ಬೆಂಬುಡಿ ಬೆಯ್ಸಿ ಮುಚ್ಚುವುದೆಲ್ಲಮಂ ॥

---

2. ಸಾಮರ್ಥ್ಯವಂತರನ್ನು ಮಾಡಿದ. 3. ಕಂಡ ನೀರಿನ ಝರಿಯನ್ನು ಮುಚ್ಚಲಾಗಿ. 4. ಭೂಮಿಯು ತನ್ನ ಪತಿಗೆ ಛತ್ರವನ್ನು ಕಲ್ಪಿಸಿದ ತರಹವು ಇಲ್ಲಿ ವರ್ಣಿತವಾಗಿದೆ. 5. ನಿನ್ನ ಪತಿಯನ್ನು ಸಾಂತ್ವನಗೊಳಿಸುವ ನಿಮಿತ್ತವಾಗಿ ಹೀಗೆ ಹೀಗೆ ಸೈನ್ಯದ ಸಿದ್ಧತೆಯನ್ನು ಮಾಡು ಎಂದು ಭೂಮಿಗೆ ಬಿನ್ನಹ.

ಜನಪ ಕೋಟಲೆ ಸಾಕು ಮನ್ನಿಸವೇಳ್ಪುದೆನ್ನಯ ಮಾಳ್ಕೆಯಂ ।
ಎನುತ ಝೂರಗೆ ತೋರ ಮೇದಿನಿ ಸೌಖ್ಯಕೌಮುದಿಛಾಯೆಯಂ[6] ॥೮॥
ಪೊಡವಿಗಚ್ಚರಿಯಪ್ಪ ಪೆಂಪಿನ ಬಟ್ಟೆ ಚಿನ್ನದ ಪಟ್ಟಮಂ ।
ಬೆಡಗಿನಿಂ ಪೊಳೆವಂತೆ ಮಾಳ್ಪ ಸುಹಾಸರಂಜಿತರೂಪಮಂ ॥
ಕೆಡಹಿ ಬಂದಿಯೊಳಿತ್ತು ಕೀಳುಡಿಯಂ ಪುರುಳ್ಗೆಡಿಸಲ್ಕೆಹಾ[7] ।
ಕಡಲು ಪೊಂಡವದಾದವೊಲ್ ನೃಪಮೂರ್ತಿ ದೀನಮೆನಿಪ್ಪುದು ॥೯॥
ಗಿಡದ ಗಡ್ಡೆಯೊಳೀಡಿ ದೇಹವ ಸೀಡಿ ಕೈಯನು ಗದ್ದಕೆ ।
ಬಿಡದೆ ಕಂಬನಿಯಿಕ್ಕಿ ಮೋರೆಯ ಜೋಲುಗೈದಿಹ ಝೂರನು ॥
ಒಡಝುವಂ ಮುರಿದೊತ್ತಿ ತನ್ನಯ ವಾಸಮಂ ಸಿರಿ ಬಿಟ್ಟಳಿಂ- ।
ದೊಡನೆ ಉಮ್ಮಳಿಪಬ್ಜ ವಂಶದ ಬಳ್ಳಿಯಂತಿಹನಕ್ಕಟಾ[7] ॥ ೧೦ ॥
ಎನ್ನಯ ದೇಶವೆನ್ನ ಸಿರಿ ಯೆನ್ನಯ ವೈಭವವೆನ್ನ ತಂತ್ರಮ- ।
ತ್ತೆನ್ನಯ ಮಿತ್ರರೆನ್ನ ಬಳಗೆನ್ನಯ ಸೇವಕರೆತ್ತ ಪೋದರೋ ॥
ಎನ್ನುತೆ ಶೋಕದಿಂದ ಬಳಲುತ್ತಿಹ ಚಂಚಲನಪ್ಪ ಝೂರನು ।
ಪ್ರೋನ್ನತ ಬಾಡಬಾಗ್ನಿಯೊಳು ಕಾದ ಸುವರ್ಣದ
ನೀರ್ಗೆ ಪೋಲುವಂ ॥ ೧೧ ॥
ಮಾನವಮಾರ್ಗಗಾಮಿ ಮರಕರ್ಪುರದೀಪಮೊ ಧರ್ಮಮಾರ್ಗ
ಯೊಳ್ ।
ದೀನತೆಯಿಂದ ಜಾರ್ವ ಜಲಬುದ್ಬುದಮೋ ಕರುಣಾಬ್ಧಿ
ಮಧ್ಯದೊಳ್ ॥
ನಾನುತೆ[8] ತೇಲ್ವ ಚೀನಪಟಮೋ ಸಮವೃತ್ತಿಪಯೋಧಿವೀಚಿಯೋ ।
ತಾನೆನೆವಂತೆ ತೆತ್ತಿದನು ತನ್ನ ವರಾಂಗವ ಹೀನಸೇತಿಗೆ ॥ ೧೨ ॥

---

6. ಸೌಖ್ಯವೆಂಬ ಬೆಳದಿಂಗಳ ನೆಳಲನ್ನು ತೋರಿಸು. 7. ಕಮಲದ ಎಲ್ಲ ಜಾತಿಗಳನ್ನೊಳಕೊಂಡ ಒಂದೇ ಒಂದು ಬಳ್ಳಿಯಂತೆ. 8. ನೆನೆಯುತ್ತ ತೇಲುವಂಥ ರೇಶಿಮೆಯ ವಸ್ತ್ರವೋ ?

೫.

ಮಧ್ಯರಾತ್ರಿಯಲ್ಲಿ ಕೇಳಬಂದ ಆಂಗ್ಲಗಾನವು.

[ಧಾರವಾಡದಲ್ಲಿ ನಾನಿದ್ದ ನೆರೆಹೊರೆಯಲ್ಲಿ ಒಬ್ಬ ಕ್ರಿಶ್ಚನ್ನನ ಮನೆಯಿತ್ತು. ಅವನಿಗೆ ಒಂದು ಮುಂಗಡಿ ಕೂಸು ಇದ್ದು ಅವನ ಹೆಂಡತಿಯು ಅದೇ ಮತ್ತೊಂದು ಕೂಸನ್ನು ಹೆತ್ತಿದ್ದಳು. ಅವನ ಮನೆಯಲ್ಲಿ ಬಂದ ಒಬ್ಬ ತೊತ್ತು ಮುಂಗಡಿ ಕೂಸನ್ನು ಸಾವಧಾನ ಮಾಡುವ ಉದ್ದೇಶದಿಂದ ಏನೋ ಹಾಡುತ್ತಿದ್ದಳು. ಒಮ್ಮೆ ಮಧ್ಯರಾತ್ರಿಯಲ್ಲಿ ಆ ಹಾಡು ನನಗೆ ಕೇಳಬಂದಿತು. ಪ್ರಶಾಂತವಾದ ರಾತ್ರಿಯಲ್ಲಿ ಆ ಹಾಡು ನನ್ನ ಮನಸ್ಸಿನಲ್ಲಿ ನಾನಾ ಕಲ್ಪನೆಗಳನ್ನು ಹುಟ್ಟಿಸಲಾಗಿ ನಾನವುಗಳನ್ನೆಲ್ಲ ಈ ಕವಿತಾ ರೂಪದಿಂದ ಬರೆದಿಟ್ಟೆನು. ಇದರಲ್ಲಿ ರಾತ್ರಿಯ ವರ್ಣನೆಯು ಬಹಳ ಸರಸವಾಗಿರುವುದಾಗಿ ಕಂಡುಬರುತ್ತದೆ. ಗಾನಭಾವಗಾನಸಂದೇಶಗಳೆಂಬ ಭಾಗಗಳಲ್ಲಿ ಪಾಶ್ಚಾತ್ಯಜ್ಞಾನದ ನಿರ್ದುಷ್ಟವಾದ ಸ್ವೀಕಾರವಿರುವುದು. ಸಮಗ್ರ ಕಾವ್ಯವೂ ರಸವತ್ತಾಗಿರುವುದೆಂದು ನನ್ನ ವಿಶ್ವಾಸವುಂಟು.

ಇದು ವಾರ್ಧಿಕ ಷಟ್ಪದಿಯಲ್ಲಿ ಉಂಟು. * ಈ ಸ್ಥಳಗಳಲ್ಲಿ ಪ್ರಥಮಾಕ್ಷರದ ಬಗ್ಗೆ ಇದ್ದ ಕವಿಸಾಂಪ್ರದಾಯವು ಭಂಗವಾಗಿರುತ್ತದೆ.

೧. ಗಾನಸಮಯವು.

ಸ್ತೋತ್ರರತ-ತಾರೆಗಳು [1] ತಮ್ಮ ಹೊಗಳಿಕೆಯೊಳೇ- ।
ಕತ್ರವಾಗುತೆ ತನ್ನ ಕಾಂತಿಯೊಳ್ಸರ್ವ ಪರ- ।
ತಂತ್ರಿಯಾದಿಳೆಯನ್ನು ನಗುವಂತೆ ಪೊಳೆಯಲವಳಾನನವು
ಕರಿದಾಗಿ ಮೇಣ್ ॥

1. ಮೊದಲನೆಯ ಎರಡನೆಯ ಪದ್ಯಗಳಲ್ಲಿ ನೂತನ ಶಾಸ್ತ್ರಶೋಧಗಳು ಕಾವ್ಯಮಯವಾಗಿ ವರ್ಣಿಸಲ್ಪಟ್ಟವೆ.

ಮಿತ್ರನಿಲ್ಲದ ಪಾಪಿ ತನ್ನೊಳೇ ಅಗಿವಂತೆ ।
ಧಾತ್ರಿತಾಂ ಪೊಡೆಮಗುಗಳಡಿಯಡಿಗೆಯದಿರುತಿರೆ[2] ।
ರಾತ್ರಿ ಸಂದಟ್ಟವಾಗಿರ್ದು ನಿಶ್ಯಬ್ದವಾಗುತೆ ಶಬ್ದಮಯ
ಮಾಯಿತು ॥ ೧ ॥

ಗಿರಿಯಿಂದೆ ಗಿರಿಗೆಲರನುಯ್ಯಲಾಡುವ ಸುಯಿಲು ।
ತರುಲತೆಗಳೂಟವಿಲ್ಲದಕೆ ವಿಷವಾಯವಂ ।
* ಕಾರಿಯೆಲೆ-ಟೊಂಗೆಗಳನೆಳೆದು-ಕೊಳ್ಳುತೆ ದುಃಖದಿಂ ಬಿಟ್ಟ
ನಿಟ್ಟುಸಿರುಮೇಣ್ ॥

ತೊರೆದು[3] ನಿಂತಿಹ ತೋಟಪಟ್ಟಗಳ ಕಾವಲರು ।
ಮರೆಮೋಸದಯ್ಯನವರೆನಿಸಿರ್ದ ನರಿದೊದ್ದೆ- ।
* ಯೋರಂತೆ ಹೊಡೆವ ಕೇಕಿಗಳು ಮೇಳೈಸಿ ಕಾರಿರುಳ ಕೀರ್ದನಿ
ಕಾವುವು ॥ ೨ ॥

ನಿಃಯೊಳಿದೆಗುಡಿಯು[4] ನಿಚ್ಚಳವಾಗಿ ಕೇಳಬಡ- ।
ಲುಸಿರಾಟವೆಗ್ಗಳಿಸಿ ಕಿವಿಗೆ ಕೀಸರವಾಗೆ ।
ಪುಸಿವನಿಯು ದೆಸೆದೆಸೆಯೊಳುಣ್ಮಿವಂತಾಗೆ ಜನಮನವು
ಭಯಬಡುವಂತಿರೆ ॥

ಮಸಣಪಾಳ್ಮನೆಮಂರಂಗಳಿನೆದ್ದ ದೆವ್ವಗಳ್ ।
ನುಸುಳುವುವೊ ! ಕರಿಕಳ್ಳರುಂ ಹೊಂಚುವರೊ ? ಮತ್ತ- ।
ಮುಸುಗೊಳ್ವ ಜಂತುಗಳ್ ಇಚ್ಚುವುವೊ? ಎನುವಳಕು ಕತ್ತಲೆಯ
ಕಂಗೆಡಿಪುದು ॥ ೩ ॥

---

2. ತನ್ನ ಹೊಟ್ಟೆಯ ಮಕ್ಕಳ ಹೆಜ್ಜೆಗೆ ಹೆದರಿ. 3. "ತೊರೆದು" ಎಂಬೊಂದೇ ಶಬ್ದದಿಂದ ಫಲಶೂರಿತವಾದ ತೋಟದ ವರ್ಣನೆಯು ಹೇಳಲ್ಪಟ್ಟಿದೆ. 4. ರಾತ್ರಿ.

೧೮. ಮಧ್ಯರಾತ್ರಿಯಲ್ಲಿ ಕೇಳಬಂದ ಆಂಗ್ಲಗಾನವು.

[5]ದೂರದಿಂ ಗಾಳಿ ನೂಂಕಿದ ದನಿಯು ಕೇಳಲದು ।
ಕೋರಿಕೆಯು ಕೈಗೂಡಿದಾ ಜನರ ಹೋಳಿಯೋ ? ।
ಪ್ರಾರಬ್ಧವೆರವಾಗೆ ಪಾಪಿಗಳು ಬೊಬ್ಬಿಡುವ ಬಳಲಿಕೆಯ
ಭೋರಾಟವೋ ? ॥

[6]ಕಾರಿರುಳ್ಕಮ್ಮರನು ಧಾರಿಣಿಯ ದೇಹಿಗಳ ।
ಘೋರಭವತಾಪಮಂ ತಂಗೈಸೆಸುಮನರ್ಕ- ।
ಳಾರೈಕೆಯಿಂದೊರೆವ ಜೋಗುಳವೊ ? ಪೇಳೆನೇಬಂತೆ ಮನವುರೆ
ಮಿಡುಕಿತು ॥ ೪ ॥

ಭ್ರಮರ-ಶುಕ-ಹಂಸ-ಪಿಕಸುಸ್ವರಗಳಡಗಿರಲು ।
ದಮಿಯೌಂಕಿದೆಡೆಯೊಡೆವ ಸೂಳೆಗೇರಿಯ ಪರಾ- ।
ಕ್ರಮಗಮಕ ಗಾನವುಂ ನಿಲಲು ಗಂಧರ್ವ ವರಸಂಗೀತದಾ
ಸಮಯವಂ ॥
* ಕಾಮಿಸುತೆ ಭೂದೇವಿ ಸೌಮ್ಯದಿಂದುಸಿರ್ವಂತೆ ।
* ಸೀಮೆಸೀಮೆಗಳಲ್ಲಿ ಶಾಂತತೆಯು ಸೇರಿರಲು ।
* ಕಾಮಿನಿಯೆ! ನಿನ್ನಾಂಗ್ಲ-ಗಾಯನವು ಮೋಹಿಸಿತು ನನ್ನ
ಮನದೇಳಿಗೆಯನು । ೫ ॥

೨. ಗಾನವಿಸ್ತಾರ.

ಆರಯ್ಯದಾ ರಾಗ ಕುಣಿಯಲೆಳೆಸುವ ತಾಳ ।
ತಾರಮಂದರ-ಸಿನದ ತೀವ್ರಕೋಮಲನಾದ ।
[7]ಪೇರಿಸಿದ ಧೃತಮಂದರೀತಿ ಯೆಳೆದೆನ್ನುವಾ ಸ್ವರಗಳಿಂಕೂಡಿಮೆರೆವಾ॥

---

5. ಪ್ರತಿಯೊಬ್ಬನಿಗೂ ರಾತ್ರಿಯ ಕಾಲದಲ್ಲಿ ಹೃದ್ಗೋಚರವಾಗುವ ಭಯಾದಿ ಭಾವಗಳು ಯಥಾಸ್ಥಿತವಾಗಿ ೩ ನೆಯ ಹಾಗು ನಾಲ್ಕನೆಯ ಪದ್ಯಗಳಲ್ಲಿ ವರ್ಣಿತವಾಗಿವೆ. 6. ರಾತ್ರಿಯೆಂಬ ಕಮ್ಮರನು ಜಗತ್ತಿನ ಜೀವಿಗಳ ಭವತಾಪವನ್ನು ನಿದ್ರೆಯಲ್ಲಿ ಮರೆಯುವಂತೆ ಮಾಡಲಾಗಿ. 7. ಮೇಲಿಂದ ಮೇಲೆ ಬರುವ.

ಪೌರದೇಶಿಕ ಗಾನಮಂ ಕೇಳೆ ಪಾಲಮುಃ ।
ನ್ನೀರಿನೊಳ್ಮಿಂದು ಶಶಿತಿಲಕವನ್ನಿರಿಸಿ ಸುರ- ।
ಸೌರಭವ ತೊಡೆದಮೃತಮಂ ಕುಡಿದು ಕಲ್ಪತರು-ತಲದೊ
ಳಿರ್ದ-ವೊಲಾದುದು ॥ ೬ ॥

ಕನಲಿ ಕೆಂಪಾಗಿ ನಿಜರಮಣನೆಲೆ ಜಗುಳ್ದ[8] ನೆಂ[*]- ।
ದೆನುತಪರದಿಶೆಯು ದೂತೆಯನು ತಗುಳಿಸಿರಲಾ[9] ।
ವನಿತೆ ತವಕದೊಳುಷೆಯ ಪೊಂಬಣ್ಣದರನುನೆಯ ಕದನ
ಸಾರುವ ಕಾಲಕೆ ॥

ಮುನೆವಳನು[10] ತಾನಾಗಿ ಕಾರಿರುಳು ನಿಂದೊಡವ- ।
ನನು ತವಿಸಿ ದಿನಮಣಿಯು ಬಣ್ಣಿಸಲು ಪಾಡಿದಾ ।
ಘನಗಾನಮೆಂಬಂತೆ ತರತರದ ಭಾವಮಂ ವ್ಯೆಗೊಂಡುದಾ
ಗಾಯನಂ ॥ ೭ ॥

೩. ಗಾನಭಾವ.

ಮರೆಳರೀ ಮೂಡಣಿಗರೀಗಲುಂ ತಮ್ಮ ಪರಿ- ।
ಪರಿಯ ಗತವೈಭವದ ನೆನಹಿನೊಳ್ ಮರೆದಪರು ।
ಭರದಿ ಮುಂದರಿವೆನ್ನ ಸಿರಿಯ ಸಂಭಾವಿಪರೆ? ನೋಳ್ಪೆನೆಂದ
ಪರ-ದಿಶೆಯು ॥

ತ್ವರಿತದೊಳ್ ತನ್ನ ಮುಮ್ಮೂರು[11] ಸರಸತಿಯರ್ಗೆ ।
ಯರಿಕೆಯಂ ಮಾಡಲವರಿವದೆ[12] ತಂತಮ್ಮ ಸಡ- ।
ಗರದ ಕೆಲಸವ ತೋರಿಸಿದರದನು ನರವಚನದಿಂದೆ ನಾನೇಂ
ಬಣ್ಣಿಪೆಂ ? ॥ ೮ ॥

---

8. ಜಾರಿಹೋದನು. 9. ಹಿಂದಿನಿಂದೋಡಿಸು. 10. ಮನೆಗಾವಲನು. 11. ಪಾಶ್ಚಾತ್ಯರಲ್ಲಿ ಒಂಬತ್ತು ವಾಗ್ದೇವತೆಗಳೆಂದು ನಂಬಿಕೆ. ಅವರಲ್ಲಿ ಪ್ರತಿಯೊಬ್ಬಳು ಒಂದೊಂದು ವಿಷಯದ ಅಭಿಮಾನ ದೇವತೆಯಾಗಿರುವಳು. 12. ಬಿಡದೆ.

೨೦. ಮಧ್ಯರಾತ್ರಿಯಲ್ಲಿ ಕೇಳಬಂದ ಆಂಗ್ಲಗಾನವು.

ಜ್ಯೋತಿಷದದೇವಿ ಕೈಕೋಲಿನಿಂ[13] ತನ್ನ ಹ- ।
ಸ್ತಾಂತದೊಳ್ಮಿರೆವ ಗೋಲವನುರ್ಬಿ ತೋರಿಸಿದ- ।
ಳೈತಿಹಾಸಿಕೆ ತನ್ನ ಹಸ್ತಗತ ಪಟವ[14] ಬಿತ್ತರಿಸಿ ಚೆಲ್ವಾಗಿ ಮೆರೆದಳ್ ॥
ಪ್ರೀತಿಯಿಂ ತೂಗಿದುದು ಕಾವ್ಯದೇವೀತ್ರಯಂ[15] ।
ಥೈಥಯಿಸಿದರು ಮೂವರುಂ ನಾಟ್ಯದೇವಿಯರ್ ।
ಸಂತಸದೊಳಿದನೆಲ್ಲವಂ ನೋಡಿ ವಾರುಣಿಯು[16] ಗಾನದೇವತೆ-
ಗಳುಕಿದಳ್ ॥ ೯ ॥

ಎಲಗೆ! ನಿನ್ನಯ ಗತಿಯ ನೋಡಲಾರೆನು, ಮಗಳೆ, ।
ಮಲಿನವಸ್ತ್ರವ ತೊಲಗು ಸಪ್ತ-ಸೂತ್ರಿಯನುಡಿಸು[17] ।
ನಿಲದೆ ಸಂಚರಿಸು ಮಗು! ಪೂರ್ವದಿಗ್ದೇಶವಂ ಬಿಡು ಗಸಣಿ[18]
ಯೆನುವನಿತರೊಳ್ ॥

ಲಲಿತ ಚಂದ್ರಿಕೆ ತನ್ನ ಮೋಹದಾ ಕೈರವಂ- ।
ಗಳ ಸೂರೆ ಮಾಡಿದಂತೆಸೆಯೆ ತಾರೆಗಳು ಬಾನ್- ।
ದಳದಿಂದ ಬಿಜಯಗೈದಳು ದೇವಿ ತರಿಸಿದಳ್ ಪ್ರತಿಭೆಯಂ
ತನ್ನ ಜನರೊಳ್ ॥ ೧೦ ॥

---

13. "ಯುರೇನಿಯಾ" ಇವಳ ಒಂದು ಕೈಯಲ್ಲಿ ಒಂದು ದಂಡವೂ ಮತ್ತೊಂದರಲ್ಲಿ ಪೃಥ್ವಿಯ ಆಕಾರದ ಒಂದು ಗೋಲವು ಇರುವಂತೆ ತೋರಿಸುವರು. 14. "ಕ್ಲಿಯೋ" ಇವಳ ಕೈಯಲ್ಲಿ ಸುರಳಿ ಸುತ್ತಿದ ಕಾಗದವಿದ್ದಂತೆ ಚಿತ್ರಿಸುವರು. 15. ಒಂಬತ್ತು ವಾಗ್ದೇವತೆಗಳಲ್ಲಿ ಮೂರು ಮೂರರಂತೆ ಗುಂಪು ಮಾಡುವರು. ಆ ಗುಂಪುಗಳಲ್ಲಿ ಇವೆರಡೂ ಇರುವುವು. 16. ಪಶ್ಚಿಮದಿಕ್ಕನ್ಯೆ. 17. ಗಾನದೇವತೆಯ ಹೆಸರು "ಟರ್ಪ್ಸಿಕೋರಿ" ಇವಳು ಬಿಳಿಪತ್ತಲವನ್ನುಟ್ಟುಗೊಂಡಂತೆಯೂ ಕೈಯಲ್ಲಿ "ಲಾಯರ್" ಎಂಬ ವಾದ್ಯವನ್ನು ಹಿಡಿದಂತೆಯೂ ತೋರಿಸಿರುವರು. 18. ಚಿಂತಾತುರತೆ.

೪. ಗಾನಸಂದೇಶ.

ಸೇವಿಸಲು ನಿನ್ನ ಮೃದುಗಾನಮಂ ಮನ್ಮನದಿ ।
ತೀವಿರ್ದ ಜಂಜಡವು[19] ಪರಿದು ಪೋದುದು ಗಾನ- ।
ದೇವತೆಯ ಗೌರವವು ಚೆಂದಳಿರ ಸೋಂಪೊಡೆದ ಮಲ್ಲಿಗೆಯ ಮಾಲೆಯಂತೆ ॥
ಜೀವಮಂ ಪ್ರೇಮದಿಂ ತುಂಬಿದುದು ಲೋಕದೊಳ್ ।
ಪಾವನಂ ಪೊಂದದಾ ಭಾವಮೊಂದಿಲ್ಲವೆನೆ ।
ಗಾವಿಲನು ನಾನೆನ್ನ ಚಿತ್ತಮಂ ತಕ್ಕೈಸಿದತ್ತಿತ್ತು ಜಾಗ್ರತೆಯನು ॥ ೧೧ ॥
ಸರಸತಿಯ ಬೀಣೆಯಿಂಚರವ ಬಳಿಸಿದ ಗೌರಿ ।
ಸರಸಿಜೋದ್ಭವನ ನಾದವುಂ ಪೆರ್ಚಿಸಿದೆ ನಿನ್ನ ।
ಸರಸ ಕಲಗಾನ-ಪೀಯೂಷಮಂ ಬಳಿಕಿತ್ತೆ ದಿವ್ಯದೃಷ್ಟಿಯ ದಯಿಸಿದೆ ॥
ಸರಸರನೆ ಭಾರತಕೆ ತನ್ನರಿಕೆಯಂ ತಿಳುಪಿ ।
ಸರಿಸಮಂ ತೋರ್ವೆನೆಂದೆಂಬ ಗೀತೇಶ್ವರಿಯುಂ ।
ಸಿರಿಸಿದಳು ನಿನ್ನ ವದನಾಬ್ಜದಿಂದಲ್ಲದೊಡೆ ಸಂದುದೇ ಈ ಬಾವವು ? ॥ ೧೨ ॥

ದ್ವೇಷಭಾಂಡಾರ ನಾಟಕದೊಳಗಿನ ಪದ.

ರಾಗ ಸಾರಂಗ. ತಾಳ ಕೇರವಾ. "ತರುಲಾ ಪ್ರಿಯ" ಎಂಬಂತೆ.

ಸುಜನಾಶ್ರಯಾ ದೇವ ಶಿಖಾಮಣಿಯೇ ॥ ಪ ॥
ದುರಿತ ವಿಚಾರವು ಸೇರಿ ಮನೋಮನ ।
ದರವ ಹಿಯಾಳಿಪುದೋ ಸುಮನ ॥ ೧ ॥

---

19. ಜಾಡ್ಯತೆಯು.

೬.

ಪ್ರಾರ್ಥನಾ-ಪಂಚಕ.

[ಕೆಲವು ವರ್ಷಗಳ ಹಿಂದೆ ಬೆಳಗಾವಿಯಲ್ಲಿ "ಜ್ಞಾನಾಂಜನ" ವೆಂಬ ಮಾಸಿಕ ಪುಸ್ತಕವು ಪ್ರಕಟವಾಗಿ ಕೂಡಲೇ ಮುಗ್ಗಿಹೋಯಿತು. ಆಗ ಅದನ್ನು ಹರಸುವ ರೀತಿಯಿಂದ ಈ ಕವಿತೆಯನ್ನು ಬರೆದಿದ್ದೆನು. ಜ್ಞಾನಾಂಜನವೆಂಬ ಸಾಮಾನ್ಯ ವಿಷಯುವನ್ನೇ ಕುರಿತು ಇದನ್ನು ಓದಬಹುದೆಂಬ ವಿಚಾರದಿಂದ ಇದನ್ನು ಇಲ್ಲಿ ಮುದ್ರಿಸಿರುವೆನು. ಇದರಲ್ಲಿದ್ದ ಐದು ಶ್ಲೋಕಗಳಲ್ಲಿ ಕ್ರಮವಾಗಿ ಆಕಾಶ, ಪೃಥ್ವೀ, ಆಪ್, ತೇಜ ಮತ್ತು ವಾಯು ಇವುಗಳನ್ನು ಕುರಿತು ಬರೆದಿರುವೆನು. ಈ ಕವಿತೆಯು ಶಿಖರಿಣೀ ವೃತ್ತದಲ್ಲಿ ಉಂಟು.]

ಅಜಾಂಡಂ ಕಾಲಾಂತಂಬರೆ ಜಲಮಯಂ ಆಗೆ ಅದರೊಳ್ ।
ನಿಜಾಂಗುಷ್ಠಾಸ್ವಾದಂ ಬಿರಿಯೆ ಶಯನಂಗೈದ ಹರಿಯೇ ॥
ಅಜಯ್ಯಾಲಸ್ಯಂ ತಾಂ ಕವಿದೊಗೆದ ಕರ್ನಾಟಕಜನ- ।
ಗಜಾಡ್ಯಾಂಗಂ ಜ್ಞಾನಾಂಜನಮಿರಲಿ ಸೌಭಾಗ್ಯಕೆ ಸದಾ । ೧ ॥
ಅಣುಂ ರೇಣುಂ ಜೀವಂ ಪೊದಲೆನಿಸಿದೆಲ್ಲಂ ಬೆಳೆಸುತುಂ ।
ಗುಣಾಯೂನಂ[1] ಆಯಾ ವಿಷಯುಗಳಿಗಪ್ಪಂತೆ ನೆಗಳ್ದುಂ ॥
ಕ್ಷಣಕ್ಕಂ ವೈಫಲ್ಯಂ ತರದೆ ಸುಕೃತಂತೋರ್ಪೆ ಗಡ ಬಿ- ।
ನ್ನಣಂ ಪೊಂದೇ ಜ್ಞಾನಾಂಜನಕೆ ಧರೆಯೋ ಕೊಟ್ಟು ಮತಿಯಂ ।೨॥
ಸುಧಾಸಾರಂ ಜ್ಞಾನಂ ಪರಿಕರು ಚಕೋರಪಕುಲಮನರ್ ।
ಸುಧೀಮಂತರ್ವಿದ್ಯಾ ಪ್ರಸರಗುಣ ಪೀಯೂಷಘನರೈ ॥
ಸದಾವಿದ್ಯಾಗ್ರೀಷ್ಮಂ ಸುಡುತಿಹುದು ಕರ್ನಾಟವ ಘನಾ[2] ।
ಸ್ಪದಂತೋರ್ಕೈ ಜ್ಞಾನಾಂಜನವೆ ಸುರುತಂಗಿತ್ತು ತಣುಪಂ ॥ ೩ ॥

---

1. ಗುಣಸ್ವಭಾವವನ್ನು. ಬೇರೆ ಬೇರೆ ವಸ್ತುಗಳಿಗೆ ಬೇರೆ ಬೇರೆ ಯೋಗ್ಯವಾದ ಗುಣಸ್ವಭಾವಗಳನ್ನು ಕೊಟ್ಟು. 2. ನೀರೆರೆಯುವ ಮೋಡಗಳನ್ನು ಬರಗೊಡು.

ಕಲಾನಾಥಂ ದೀನಂ ಭಗಣಮುದು ನಿಸ್ತೇಜ ಕಣಗಳ್ ।
ವಿಲೋಲಂ ತಾಂ ವೈಶ್ವಾನರ ನಿನನು ನಿನ್ನ ಪ್ರತಿಮೆಯುಂ ॥
ದಿಲಾಲೋಕಂ ನಿನ್ನಂ ಪೊಗಳುತಿಹುದೈ ತೇಜನಿಧಿಯೇ ।
[3]ಜ್ವಲದ್ದೀಪ್ತ ಜ್ಞಾನಾಂಜನವ ದಯಿಸೈ ಕನ್ನಡಿಗರೊಳ್ ॥ ೪ ॥
ಮಹಾದಾವಾಗ್ನೀಶಂಮಲಯಗಿರಿ ಸೌರಭ್ಯವಹನೇಂ ।
ವಿಹಾರಾಂತಶ್ರಾಂತಂಗಳೆವನುದಧಿಕ್ಷೋಭಕರನೇಂ ॥
ಆಹಾ ಸ್ವೇಚ್ಛಾರೂಪಂ ಜಗದಮಿತ ಕಲ್ಯಾಣಕರನೇಂ ।
ಬಹುಪ್ರೌಢಂ ಜ್ಞಾನಾಂಜನಕೆ ಕುಡು ನೀಂ ವಾಯು ಬಲಮುಂ ॥೫॥

ದ್ವೇಷಭಾಂಡಾರ ನಾಟಕದೊಳಗಿನ ಪದ.

"ದೇ ಹಾ ತಾ ಶರಣಾಗತಾ" ಎಂಬಂತೆ.

ದೇವಾ ಕಾಯೋ ಕರುಣಾರ್ಣವಾ ।
ದನುಜಕುಲವನರೆಯುವ ಕಾರಣನ ಪಾಲಿಸುವ ನಿವಾರ
ಭಾವ ॥ ಪ ॥
ಜ್ಞಾನ ಹಾಸಿಯಲಿ ಮಾನವ ಸ್ವಾರ್ಥದಾ ಭೋಗ ಬಳಿನ
ಬಗೆಯಿಂದ ಕಿಡಿಪ ಮನವ ।
ಮನ್ನಿಸಿ ದೇಶವ ಸದಾ ಖಲರನು ನೀಂ ತವಿಸು ರಮಾಧವಾ
ಹೇ ದೇವಾ ॥ ೧ ॥

---

೩. ಎಲ್ಲ ಪ್ರಕಾಶನಗಳಿಗಿಂತ ಹೆಚ್ಚಿನ ಪ್ರಕಾಶವುಳ್ಳುದು ಜ್ಞಾನವು.

೭.

ದಿವ್ಯಾರ್ಕನಿರ್ದೇಂ ಫಲಂ.

[ಈ ಸಂಸಾರದಲ್ಲಿ ನಡೆದ ಆಚಾರವಿಚಾರಗಳನ್ನೂ ಒದಗಿಬರುವ ಸಂಗತಿಗಳನ್ನೂ ಲಕ್ಷ್ಯಪೂರ್ವಕವಾಗಿ ನೋಡಹೋದರೆ ನಮಗೆ ಒಂದು ಬಗೆಯ ನಿರ್ವೇದವುಂಟಾಗುವುದು. ಕತ್ತಲೆಯ ಕಾಲದಲ್ಲಿ ಮಾಡಿದ ಕಾರ್ಯಗಳು ಹೇಗೆ ಅವ್ಯವಸ್ಥಿತವಾಗಬೇಕೋ ಹಾಗೆ ಸೂರ್ಯನು ಪ್ರಕಾಶಿಸುವ ಕಾಲದಲ್ಲಿ ಕೂಡ ನಡೆಯುತ್ತಲಿರುವುವು. ಇದೆಂಥ ಅನ್ಯಾಯವು. ದಿವಾಕರನು ಕಣ್ಣೆದಿರಿಗಿದ್ದರೂ ಕಣ್ಣು ಮುಚ್ಚಿಕೊಂಡು ಮುಂದುವರೆಯುವ ಜನರನ್ನು ನೋಡಿದರೆ ಮನಸ್ಸಿಗೆ ಖೇದವಾಗದೆ ಇದ್ದೀತೆ? ಇಂಥ ಅವ್ಯಾಸಾರಗಳು ನಡೆದ ಮೇಲೆ ದಿವಾಕರನಿದ್ದಾದರೂ ಏನು ಫಲ? ಏನೂ ಫಲವಿಲ್ಲವೆಂಬಂತೆ ಜನರು ತಮ್ಮ ಕೃತಿಯಿಂದ ತೋರಿಸಿದರೂ ದಿವಾಕರನು ದಿವ್ಯವಾಗಿಯೇ ಸರ್ವಕಾಲದಲ್ಲಿಯೂ ನಮಗೋಸುಗ ಹೊಳೆಯುತ್ತಲೇ ಇರುವನಲ್ಲವೇ? ಈ ಕವಿತೆಯು ಕೆಲವು ದಿನಗಳ ಮಟ್ಟಿಗೆ ಪುನರುಜ್ಜೀವನವನ್ನು ಹೊಂದಿದ್ದ "ಪ್ರಭಾತ" ದಲ್ಲಿಯೇ ಮುದ್ರಿತವಾಗಿತ್ತು.]

ರವಿ ಸಸ್ಯಾದಿಗೆ ಜೀವ ವಿಶ್ವಕೆಲೆ ಸುಪ್ರಖ್ಯಾತತೇಜೋಧನಂ ।
ರವಿಯಿಂದಂ ಮಳೆ ಬುದ್ಧಿಯೇಳ್ಗೆಗೆ ಇನಂ ಮುಖ್ಯಂ
ಸಹಾಯಂ ಸದಾ ॥
ರವಿದೋರಲ್ ದಿನಕಾರ್ಯಸಿದ್ಧಿಗೆ ಬಲಂ ಸಂಪತ್ಪ್ರಭಾವರ್ಧನಂ ।
ರವಿಯುಂ ಪೂಜಿಸುತಿಂತು ಮಾನಿಸರದೇಂ ಕೀಳ್ಗೈವರಾ
ಕಾಂತಿಯುಂ ॥ ೧ ॥

ಗುಣಿಯುಂ ಮನ್ನಿಸರಾರ್ಯಕಾರ್ಯವನು ಕೈಕೊಳ್ಳರ್ ಮಹಾ
ಗರ್ವದೊಳ್ ।
ತಣಿಸರ್ ದೀನ ಜನಾಶೆಯಂ ಪ್ರಗುಣಿಸರ್ ಧರ್ಮಾರ್ಥಕಾಮಾ
ದಿಯಂ ॥

ಎಣಿಸುತ್ತಾರ್ಜವದಿಂದೆ[1] ಪುಣ್ಯಕೃತಿಯಂ ಬಾಳರ್ ಸುಖಾಲಂಬಿಗಳ್।
ಮಾಣರ್ ಪಾಪ ವಿಪಾಕಮಂ ಪಗಲದೇಂ ದೋಷಕ್ಕೆ ಪಕ್ಕಾ
ದುದೋ ॥ ೧ ॥

ನುಡಿಯಂ ತಪ್ಪಿಸುತಂ ಪುರುಳ್ಗೆಡುತೆ[2] ಮೇಣ್ ವ್ಯಾಪಾರದಿಂ
ಬೆಂಬವೊಲ್ ।
ಸೆಡೆಯುತ್ತೈಸಿರಿ ಕೈಸಿರಿತ್ತುರುಬಿನಿಂ[3] ವಿಶ್ರಾಂತಿಯುತ್ತ್ಯಾಶೆಯಿಂ ॥
ಎಡೆಸೂಳಿಲ್ಲದೆ[4] ತಿಂದು ಕೊಬ್ಬಿ ಮೆರೆವಾ ಕಾಲಕ್ಕೆ ಬೇಡುಂಬವಂ ।
ದುಡಿಸುತ್ತಾಜನ ವೃತ್ತಿಯಂ ಕೆಡಿಸುತಂ ಮಾಳ್ಪರ್ ಮಹಾ
ದ್ರೋಹಮಂ ॥ ೨ ॥

ಪೊಡಲೆಂಬರ್ ಕಿರಿಬೇಂಟೆಯೇಂ ಬರೊಲನಿಂದಾರ್ಕೈ[5]ಕೆಯೆಂದಾತುತೇಂ ।
ಕಡುವೇಗಕ್ಕುರೆ ಮೆಚ್ಚಿ ಬೆಂಕೆ-ಹೊಗೆ ಮಿಂಚಿಂ ಪೋಪತೇರೆಂಬರು ॥
ಕಡಿವರ್ ಕೊಲ್ಲುಗರೇರ್ದ ತೇರ್ಬುಡದೊಳಂ ಕೊಚ್ಚಿಟ್ಟು
ದೂರ್ಕೈದಪರ್ ।
ದಿಡಮೈ[6] ಪ್ರಾಣಿಗಳನ್ನನೇಕ ನರರಂ ದಿವ್ಯಾರ್ಕೆ ನಿರ್ದೇಂ ಫಲಂ ।೪॥

---

1. ಸರಳ ಮನಸ್ಸಿನಿಂದ ಪುಣ್ಯಕಾರ್ಯವನ್ನು ತಿಳಿದುಕೊಳ್ಳದೆ.
2. ಸತ್ವಹೀನರಾಗಿ. 3. ಅಧಿಕಾರ. 4. ಸ್ಥಳಕಾಲಗಳ ವಿಚಾರವಿಲ್ಲದೆ.
5. ಸ್ವಗಕ್ಷತೆಯಿಂದು ಒದರುತ್ತ. 6. ದಿಟ.

೮.

ದೇವರಲ್ಲಿ ಅರಿಕೆ.

[" ಸಂಕಟ ಬಂದಾಗ ವೆಂಕಟರಮಣ " ಎಂಬುದೊಂದು ಗಾದೆಯುಂಟು. ನನಗೆ ಒಂದು ಸಮಯದಲ್ಲಿ ಅನಿವಾರ್ಯವಾದ ಗಂಡಾಂತರವು ಬಂದು ಮಾನಹಾನಿಯಾಗುವಂತೆ ಕಂಡುಬಂದಿತು. ಆಗ ಚಿಂತಾಕ್ರಾಂತನಾಗಿ ದೇವರ ನಾಮಸ್ಮರಣೆಯನ್ನು ಮಾಡುವ ಕಾಲದಲ್ಲಿ ಈ ಬಗೆಯಿಂದ ನನಗೆ ಬೋಧವು ದೊರೆಯಿತು. ದುಃಖದಲ್ಲಿದ್ದಾಗಲೇ ಮನುಷ್ಯನ ಚಿತ್ತವು ಅನೇಕಪ್ರಕಾರವಾಗಿ ಜಾಗ್ರತವಿರುತ್ತದೆ. ಕವಿತೆ ಬರೆಯದೆ ಬಿಟ್ಟು ಕೊಟ್ಟ ಬಳಿಕ ಎಷ್ಟೋ ದಿನಗಳಾದ ತರುವಾಯ ದುಃಖಮುಖದಿಂದ ನನಗೆ ಕಾವ್ಯಸ್ಫೂರ್ತಿಯಾಯಿತು.

ಹೊಡಗೊಂದನೊಳಗೊಂದ ನಿರಿಸಬೇಡೆಲವೊ ನಾರಾಯಣ ।
ನಿರುತದಲಿ ನನ್ನಿಯನೆ ತೊಳಗಿಸೆನ್ನೊಳು ನಾರಾಯಣ ॥ ೧ ॥
ಜನರು ಕಾಣದು ನನ್ನ ಮನವನೆಂದೆನುತೆ ನಾರಾಯಣ ।
ಮನಕೆ ವಿದ್ರೂಪವನು ತರಿಸಬೇಡೆಲವೊ ನಾರಾಯಣ ॥ ೨ ॥
ಜನರು ಹೊರಗಣ ನಗೆಗೆ ಮೋಹಿಪರದೆಂದು ನಾರಾಯಣ ।
ನನಗೆ ದುಷ್ಕೃತಿಯೊಳಿಚ್ಛೆಯನು ತೋರದಿರು ನಾರಾಯಣ ॥ ೩ ॥
ಜಗದೊಳಗೆ ಅಧಿಕಾರವೆಂಬುದದಲಘುವೆ ನಾರಾಯಣ ।
ಲಘುಚರಿತವದರಿಂದೆ ಪುಟ್ಟದಿರಲೆನಗೆ ನಾರಾಯಣ ॥ ೪ ॥
ಲೋಕದೊಳಗಣ ಜನರ ಜೆಲೆಯರಿಯದಂತೆ ನಾರಾಯಣ ।
ಕಾಕುಬನೆಯನು ನೀಡಿ ಪಾಪಕೆಳೆಯದಿರು ನಾರಾಯಣ ॥ ೫ ॥
ನನ್ನಾಶೆ ನನಗಿರಲು ಹೆರವರಾಶೆ ಗಿಡೆ ನಾರಾಯಣ ।
ಬನ್ನವನು ನಾನೆಂದಿಗೂ ತಾಳೆನೆಲವೊ ನಾರಾಯಣ ॥ ೬ ॥
ಪರರ ದುಃಖವ ಕಂಡು ಹರುಷವನು ಪಡಲು ನಾರಾಯಣ ॥
ಸೆರಗಿನಲಿ ಕಟ್ಟಿದ್ದ ಬೆಂಕೆ ತಾನಹುದು ನಾರಾಯಣ ॥ ೭ ॥

ಪರರ ಹಿತವನು ತಿಳಿಯುತವರಿಗನುವುಗೊಡೆ ನಾರಾಯಣ ॥
ನರಕಯಾತ್ರೆಯೊಳು ಗೋವಾಲವದು ದಿಟವು ನಾರಾಯಣ ॥ ೮ ॥
ನಾರಾಯಣನೆ ನಿನ್ನ ಸೇರುವಾಸೆಯುದು ನಾರಾಯಣ ।
ದೂರಾಗಿ ಸಮಬುದ್ಧಿಯನು ಕಾಣೆನಯ್ಯ ನಾರಾಯಣ ॥ ೯ ॥
ಈ ಸಮಯದೊಳು ದುಷ್ಟಜನ ಬಾಧೆಗಳ ನಾರಾಯಣ ।
ನಾಶಮಾಡದೊಡೆನಗೆ ಲೇಸಿಲ್ಲವಯ್ಯ ನಾರಾಯಣ ॥ ೧೦ ॥
ಒಳ್ಳೆಬಗೆಯನು ನೀಡಿ ಕಾಯಬೇಕೆಲವೊ ನಾರಾಯಣ ।
ಒಳ್ಳೆಯವನೆನಿಸಿಕೊಂಡಳಿವವೊಲು ದಯಿಸು ನಾರಾಯಣ ॥ ೧೧ ॥

ದ್ವೇಷಭಾಂಡಾರ ನಾಟಕದೊಳಗಿನ ಪದಗಳು.

ರಾಗ ಮಾಂಡಗಭಾರ್. ತಾಳ ದಾದರಾ. ‘ಮಾನಸಕಾ ಬಧಿರಾನೆ’ ಎಂಬಂತೆ.

ದೈವಬಲ ಪತಿರಾಯ ।
ನಪವಿದೇನಲ್ಲ ಜಗಕೆ ॥ ಪ ॥
ಬಲವಂತನಾವ । ಇಲಾ-ಕಾಂತ ನಾತ ।
ಕಲಿಯಾಗೋ ವಿನಯಾ । ವಾಸ ॥ ೧ ॥

ರಾಗ ಬಾಗೇಸರಿ. ತಾಳ ತ್ರಿವಟ. ‘ಪ್ರೇಮ ನಚ ಜಾಯಿ’ ಎಂಬಂತೆ.

ದೇವ ಪರಮೇಶ, ಕಾಯೋ ।
ಜೀವಂಗೆ ಶಾಂತತೆಯನೀ ಈಯೋ ॥ ಪ ॥
ವಿಷಯ ವಾಸನ ಶಿಖಿಗೇ ಸಮಾನ ।
ನಿಶ್ಶೇಷಾಂತ ಕಾರಿ ಶಾಂತತೆಯಾವಸಾನ ॥ ೧ ॥

೯.

ಮೋಹಿನೀವಿರಹ.

[ಈ ಕೃತಿಯು ಕೀಟ್ಸ್ ಕವಿಯು ಆಂಗ್ಲ ಭಾಷೆಯಲ್ಲಿ ಬರೆದ "ಇಸಾಬೆಲಾ" ಎಂಬ ಕವಿತೆಯ ಅನುವಾದವು. ಇದನ್ನು ಅತಿಶಯ ಸರಳ ಭಾಷೆಯಲ್ಲಿ ಬರೆದಿರುವೆನು. ಇದರಲ್ಲಿ ವರ್ಣನೆಗಿಂತ ಕಥಾಭಾಗವೇ ವಿಪುಲವಾಗಿರುವುದು. ಆದರೆ ಕೊನೆಯ ಒಂಬತ್ತು ಶ್ಲೋಕಗಳನ್ನು ನಮ್ಮ ಕಾವ್ಯರೀತಿಗನುಸಾರವಾಗಿ ಬರೆದು ಕಥೆಯನ್ನು ಸಮಾಪ್ತಿಗೊಳಿಸಿರುವೆನು. ಈ ಕಥೆಯಲ್ಲಿ ನಿರೂಪಿತವಾದ ವಿಷಯಗಳಲ್ಲಿ ದುಃಖವೇ ಪ್ರಾಧಾನ್ಯವಾಗಿರುವುದು. ಮೋಹಿನಿಯ ಪ್ರೇಮ ನಿರ್ಭರವನ್ನು ಕಂಡು ಅವಳಿಗೆ ಬಂದ ವಿಪತ್ತಿನ ಬಗ್ಗೆ ಎಲ್ಲರೂ ಮನಃಪೂರ್ವಕವಾಗಿ ಶೋಕಬಡುವುದು ಸಹಜವು. ನಿರ್ವ್ಯಾಜವಾದ ಪ್ರೇಮಕ್ಕೆ ದುರವಸ್ಥೆಯುಂಟಾಗುವುದು ಎಂಥ ಹೃದಯ ದ್ರಾವಕ ಪ್ರಸಂಗವು! ಈ ದುರ್ವಿಪಾಕವು ಎಂಥ ನ್ಯಾಯವೋ? ದೇವರಿಗಷ್ಟೇ ಇದರ ಗುಟ್ಟು ತಿಳಿದಿರಬಹುದು.]

ಇರುವಳೊರ್ವಳು ದಿವ್ಯಸುಂದರಿ ।
ಪರಮ ಸದ್ಗುಣಿ ಧನವಿರಾಜಿತೆ ।
ವಿರಹಿ[1] ಮೋಹಿನಿಯೆಂಬ ತರುಣಿಯು ಕೂರ್ತಳ್ ಭೃತನನ್ನು ॥
ಅರಿದು ತನ್ನಯ ಹಾಳು ದೈವವ ।
ಮರುಗುವನು ದಿನದಿನಕೆ ಭೃತನುಂ ।
"ಸರಿಯೆ ಮೋಹಿನಿಯೊಳನು ಬಯಸುವುದ" ದೆನುತ ಚಿಂತಿಸುತ ॥
"ನಾನು ಬಡ ಸೆರೆಯಾಳು ಮೋಹಿನಿ ।
ತಾನು ಸಿರಿಮಗಳಿರ್ದೊಡಂ ಗಡ ।
ಮೌನದಿಂದವಳನ್ನು ಬಯಸೆನು ಮೂಢನಾನಲ್ತೇ" ॥

---

1. ವಿರಹಿ ಎಂಬ ಶಬ್ದದಿಂದ ಮೋಹಿನಿಯ ಭವಿತವ್ಯತೆಯನ್ನು ಈಗಲೇ ಸೂಚಿಕೊಟ್ಟಂತಾಯಿತು.

ಧ್ಯಾನಿಸುತಲಿರಲಿಂತು ಭೃತ ತಾಂ ।
ಶಾನೆ ನೊಂದಳು ಬಾಲೆ ಮೋಹಿನಿ ।
ಮಾನವನ್ನುಳಿ ಕಾಯ್ದು ಭೃತನನು ಗೆಲ್ವೆನೇ ಎಂದು ॥ ೨ ॥
ಹರಡೆ ಪ್ರೇಮಾವರಣ ಮೆತ್ತಲು ।
ತೊರೆಯದಾಯಿತು ಭೃತನ ನೋಟವು ।
ಸರಸಮಹ ಮೋಹಿನಿಯ ರೂಪವನೀಗ ಮೋಹಿನಿಯು ॥
ಬರೆವಳೈ ಚಿತ್ರದಲಿ ಭೃತನನು ।
ನಿರುತಮವಳಕ್ಕರದ ವೀಣೆಯು ।
ಸುರಿಸುವುದು ನಿಜರಮಣವಾರ್ತೆಯ ನಾದನಾದದಲಿ ॥ ೩ ॥
ಬರಲು ಬಾಗಿಲವನ್ನು ತೆರೆಯುತ ।
ನಿರುಕಿಪಳು ಭೃತನಾನನೇಂದುವ- ।
ನರಿತವನು ಮೋಹಿನಿಯು ನೋಳ್ಪನು ದೂರದಿಂದವನು ॥
ಕೊರಗುವನು ಸಲೆ ರಾತ್ರಿಯೆಲ್ಲನ ।
ಬರುವನೇ ಗಡಮಾಗಿ ತರಣಿಯು ।
ತರುಣಿ ಮೋಹಿನಿಯಾಸ್ಯಕಮಲವ ತೋರ್ವನೇ ಎನುತ ॥ ೪ ॥
ಮೊಳೆವ ಗಲ್ಲವು ಬಾಡಿತೈ ತಿಂ- ।
ಗಳಲಿ ಬಳೆದಿತು ಚಿಂತೆಯುದು ಮೇಣ್ ।
ಜೆಳಗಿನಲಿ ನಾಸಿಂದು ರಮಣಿಗೆ ಪೇಳ್ವ ಮನವನ್ನು ॥
ಗಳಿಸುವೆನು ಸುಂದರಿಯ-ವಚನವ ।
ಬಳಿಕ ಸುಖಿಸುವೆನೆಂಬನಾ ಭೃತ ।
ಒಳಲುವಳು ಸತಿಯಿತ್ತ ಕೇಳದಯುವನ ವಚನವನು ॥ ೫ ॥
ಬಾಡಿಪುದು ಕೌಮಾರಿ ಕದಪದು ।
ನೋಡುತಲೆ ಸಣ್ಣಾಗಿ ಪೋಯಿತು ।
ಕಾಮವರ್ಧಕನನ್ನು ಮಲಗಿಪ ತಾಯಿಯೆದೆಯಂತೆ ॥

ಮೋಹಿನೀವಿರಹ.

ನೋಡಿ ಮೋಹಿನಿ ಬಡುವ ತಾಪವ ।
ಕಾಡುವನು ಭೃತ ತನ್ನ ಮನವನು ।
ದೂಡಬಹುದೇನವಳ ಚಿಂತೆಯನೆಂದು ಬಗೆಗೆಟ್ಟು ॥ ೬ ॥
ತಿಳಿದುದಾದರು ಮಾತನಾಡನು ।
ಕಳೆದು ಮನಸಿನ ದುಗುಡವನು ಗಡ ।
ಬಳಿಸಲಾಸಿಪನಂತರಂಗದಿ ಮನದ ಧೈರ್ಯವನು ॥
ಅಳವಡಿಸಲಿದು ಸಾಲಲಾರದೆ ।
ಕಳಚುವುದು ನಿಶ್ಚಯವು ಸವಿನುಡಿ ।
ಯುಳಿವುದತ್ತಲೆ ವಿನಯಗುಣ ಮಿಂಗಿಲಾಗೆ ಭೃತನಲ್ಲಿ ॥ ೭ ॥
ಅಱುಹಲಾರದೆ ಕೇಳಲಾರದೆ ।
ತೊರೆಯಲಾರದೆ ಮಱೆಯಲಾರದೆ ।
ಮರುಮರುಗಿ ಸಣ್ಣಾಗಿ ಸವೆದನು ಶಿಶುವಿನಂದದಲಿ ।
ಅರಿತು ಭೃತನೀ ಪ್ರೇಮನವ್ರತೆ ।
ವಿರಹಲಯವನು ಜಾಣೆ ಮೋಹಿನಿ ।
"ಅರರೆ"— ಭೃತನೆಂದೆಂದು ನಿಂತಳು ಮಧ್ಯದಲಿ ನಾಚಿ ॥ ೮ ॥
ನಯನವಾಣಿಗಳಲ್ಲಿ ಮತ್ತಭಿ- ।
ನಯದಿ ಯಡಗಿದ ಪರಿಯರಿದು ಸುವಿ- ।
ನಯದಿ ಪೇಳಿದನಾಗ ತನ್ನಾಗತಿಯ ಮೋಹಿನಿಗೆ ॥
ಪ್ರಿಯಳೆ ಚಿಂತಿಸಿ ನಿನ್ನ ದೈನ್ಯವ ।
ಜಯಿಸಿ ನಾಂ ಧೈರ್ಯವನು ಪೇಳುವೆ ।
ಸುಯಿದು ನುಂಗುವ ನನ್ನ ಗತಿಯನು ನಿನ್ನ ಕಿವಿಯಲ್ಲಿ ॥ ೯ ॥
ನಂಬುವೊಡೆ, ಪ್ರಿಯೆ, ಇದನು ನಂಜೇ ।
ಇಂಬುದೊರಕದು ಹೃದಯದೆನ್ನಯ ।
ನೀಂ ಬಿಡಲು ಪರನಾರಿಗೆನ್ನುವುದನ್ನು ಮೋಹಿನಿಯೇ ॥

ಅಂಬುಜಾಕ್ಷಳೆ ನಿನ್ನ ಕೀರ್ತಿಯ ।
ಬಿಂಬವನು ನಾಂ ಕೆಡಿಸಲೆಳೆಯೆನು ।
ತುಂಬಿದೆಂದರಿಯಾದರುಂ ನಸ್ಮಿರವು ನೀಂ ಜರಿಯೆ ॥ ೧೦ ॥

ಮದನನ್ನೆ ಚಳಿಗಾಲ ಕೆಡಿಪನು ।
ಸುದತಿ ನೀಂ ಮಧುಮಾಸ ಬೀರುತೆ ।
ಸದಯದಿಂದೀಗೆನಗೆ ನೀಡುವೆ ಎಂಥ ಪುಷ್ಪವನು ॥
ಬದಿಗೆ ಮಾಡುತಲಿಂತು ಮೈಚಳಿ ।
[2]ಗದಿಸುತೀರ್ವರು ಪಡೆದು ಸೊಗಸನು ।
ಮುದದಿ ಹಿಗ್ಗಿದರಂದು ವಾಸಂತನವಕುಸುಮದವೊಲ್. ೧೧ ॥

ಮಲಯ ಮಾರುತನಿಂದ ಸರಿಸಿದ ।
ಚೆಲುವ ಮಲ್ಲಿಗೆ ಜೋಡಿನಂದದಿ ।
ಕೆಲಕೆ ಸಾರ್ದರು ಸುಖದಿ ಕೂಡಲು ಮತ್ತೆ ಜತೆಯಾಗಿ ॥
ನಲಿದಳಾ ದಿನ ಮೋಹಿನಿಯು ತ- ।
ನ್ನಿಲಯದೊಳು ಪೂಜಿಸುತ ಮದನನ ।
ಮುಳುಗುವರ್ಕನ ಪೊಗಳುತ್ತೈದಿರೆ ಭೃತ್ಯನು ಮುದದಿಂದ ॥ ೧೨ ॥

ಇಳಿದು ಕೆಂಬಿಸಲಿನ್ನು ತಾರಾ ।
ವಳಿಯು ಕಾಣದ ಸಮಯದೀರ್ವರು ।
ಕಳೆಯುತಿರ್ದರು ಮಧುರಚಂಪಕವನವನಾಶ್ರಯಿಸಿ ॥
ಒಳಿತೆಲಾ ತಿಳಿಯದಲೆ ಜಗಕಿದು ।
ಬಳೆವುದವರಾ ಗೂಢ ಪ್ರೇಮವು ।
[3]ತಿಳಿದಮಪೆ ಭಂಗಿಸಲು ಕೇಳುವ ಶೋಕಕಥೆಗಿಂತ ॥ ೧೩ ॥

---

2. ಮಾತಾಡುತ್ತ. 3. ಪ್ರೇಮವಿತ್ತೆಂದು ತಿಳಿದ ಬಳಿಕ ಅದರ ಭಂಗದ ಸುದ್ದಿಯನ್ನು ಕೇಳಿ ದುಃಖಪಡುವುದಕ್ಕಿಂತ.

ಸುರಿಸುವುದು ಕಂಬನಿಯು ಸರಿಯೆ ।
ಸರಿಯೆ ಬಿಸುಸುಯಿದೆನ್ನುವುದು, ಹಾ ! ।
ಮರಣಕೆಡೆಯಾಗಿರಲು ಕಾಮುಕರವರ ಚರಿತವನು ॥
ನೆರಳುತಲಿ ಪೇಳುವುದು ಸರಿಯೆ ।
ಸರಿಯೆ ಇಲ್ಲವೆ ದೈನ್ಯತೋರ್ಪುದು ।
ಪರಮಸುಖಖಣಿಯವರ ಜೀವಿತವಿರಲು ಲೋಕದೊಳು ॥ ೧೪ ॥
ಮಡಿದರೇನಹುದೆನಿಬ ವಿರಹಿಗ- ।
ಳಡಿಗಡಿಗೆ ಮೋಹಿನಿಯು ದುಃಖವ ।
ಬಡಲದೇನಹುದಿಲ್ಲವೇ ಭೃತನರಿಯದಿರೆ ಸುಖವ ॥
ಅಡಗಿಪುದು ತಾಪವನುರಾಗವು ।
ಗೊಡುವ ತಸು ಸೊಗವೆಂದು ತಿಳಿಯೈ ।
ಕಟುಕುಸುಮದಲಿ ಮಧುವ ಕಾಣೆಂದುಲಿವುದಾರಡಿಯು ॥ ೧೫ ॥
ತಂದೆ ಕೂಡಿಟ್ಟಿಲ್ಲ ಭಾಗ್ಯಕೆ ।
ಬಂದ ಮೋಹಿನಿಯಗ್ರಜರು ತಾ- ।
ವಿಂದು ಮಿಗಿಲಾದೇಳ್ಗೆಯನು ಪೊಂದಿರಲು ಸುಖದಿಂದ ॥
ನಿಂದು ಖಣಿಯಲಿ ಹೋರಿ ಮನೆಯಲಿ ।
ಮಿಂದು ನದಿಯಲಿಯವರಿಗೋಸುಗ ।
ತಂದು ತುಂಬುವರವರ ಭಾಂಡಾರವನು ಸೇವಕರು ॥ ೧೬ ॥
ಶರಧಿಯನು ಮುಳಗುವರು ಭೃತ್ಯರು ।
ಹರಿದು ಜೀವಿತದಾಶೆಯನು ಪರಿ- ।
ಪರಿಯ ಸೊಬಗನು ಬಡಿಸಲುರಿ ರಕ್ತವನು ಸುಡುತಿಹರು ॥
ತರಲು ರುಚಿಯುನ್ನವರ ಜಿಹ್ವೆಗೆ ।
ಜರಗುವುದು ಕಿಂಕರರ ಸಂಕುಲ- ।
ವರಿಯದನ್ಯರು ಹೆಣಗುವರು ಬಳಸಿವರ ಲೌಲ್ಯವನು ॥ ೧೭ ॥

ತ್ತಿನುವ ದೂರ್ದಿರ್ಫವು ನಳಲೇ– ।
ನೆನಿತು ಬಳಲ್ದ್ದು*ಳುಗಳು ದುಡಿತದಿ ।
ಕೊನೆಯ ಕಂಡೊಡೆ ಪೋಪುದೇನ್ನೈ ಸ್ವಾಮಿ ಜನಮುದವು ॥

ಧನಿಕರಾದಾ ಸೋದರಂದಿರು ।
ಕನಕಲೋಭದಿ ಮರೆತು ಮಮತೆಯು ।
ನೆನೆಯದಾದರು ಗೌರವವ ಮುದದಸರದಲಿ ದಿಟವು ॥ ೧೮ ॥

ಸಿಡಿದು ಪುರಜನರಿಂದಲವರೊಳು– ।
ಸೆಡವಿನಲಿ ತರ ತರದ ಭೀತಿಯೊ– ।
ಳಡವಿಯನು ಭಜಿಸಿದರು ಗೂಬೆಗಳಂತೆ ಹೊದರನ್ನು ॥

ಸುಡುವ ಕಾಡಿನ ಹದ್ದಿನಂದದಿ ।
ನಡುವು ಬಾಗಿದ ಕತ್ತೆಯಂತೆಯೆ ।
ತೊಡಕಿದರು ಜನನಿಂದೆಗೈ ಪರಧನವ ಸೆಳೆಸೆಳೆದು ॥ ೧೯ ॥

ಕಾಸು ಕಾಸಿಗೆ ಲೆಕ್ಕವೆನ್ನುವ ।
ಹೇಸಿ ಸೋದರರೆಂತು ಕಂಡರೊ ।
ಮೀಸಲದ ಮೋಹಿನಿಯ ಪ್ರೇಮವ ಭೃತನ ಮನವನ್ನು ॥

ಕೇಸುರಿಯ ಮೊಗ ರಾಸೆ ಬುರುಕರು ।
ಗಾಸಿಮಾಡಿದುದೇನು ಪೊಸತೈ ।
ದೊ[4]ಸರವು ಸಲೆ ಕೆಡಿಸಲಾರದ ಗತಿಯು ಜಗದುಂಟೇ ॥ ೨೦ ॥

ಮಾನವರೆತರಣ್ಣಂದಿರೀರ್ವರು– ।
ಮನುಚಿತವ ಮೋಹಿನಿಯ ರಾಗವ ।
ಕನಲಿದರು ಕಂಡದುವೆ ಸಿಲುಕಿದುದನ್ನು ಭೃತನಲ್ಲಿ ॥

---

4. ಸ್ವಾರ್ಥವು.

ಅನುಜಳನು ಕೊಟ್ಟೋರ್ವ ಧನಿಕಂ- ।
ಗಿನಿದುಗೈಯಲು ಬಯಪ ಭರದೊಳು ।
ನೆನೆದದನು ಕಡು ಹೊಟ್ಟೆಯುರಿಯಿಂ ಭ್ರಾಂತರಾಗುವರು ॥೨೧॥
ತುಟಿಯ ಕಚ್ಚುವರೊಮ್ಮೆ ಬಟ್ಟೆನು ।
ಚಟ ಚಟನೆ ಮುರಿದೊಮ್ಮೆ ಹಲ್ಗಳ ।
ಕಟ ಕಟನೆ ತಿನ್ನುತ್ತ ವಟ ವಟಿಸುವರು ತಮ್ಮೊಳಗೆ ॥
ಶಠನಿಗುಣಿಸುವೆನವನ ತಾಪವ ।
ದಿಟವೆನುತ ಬದಿಗೊತ್ತಿ ಮಾಯೆಯ ।
ಛಟ ಛಟಿಸಿ ಸುಡಲವನ ಕಾಡೊಳು ಝುಟಪರೆಂ ಪೇಳ್ವೆ ॥ ೨೨ ॥
ಒಂದುದಿನ ಮುಂಜಾವಿನಲಿ ಭೃತ ।
ವಂದಿಸುತ ನಿಂತಿರಲು ರವಿಯನು ।
ಬಂದರಾ ಘಾತಕರು ಅವನಿದ್ದೆಡೆಗೆ ತೋಟದೊಳು ॥
ಪೊಂದಿದಂತಿರೆ ನೀನು ತೃಷ್ಯಾ- ।
ನಾದವನು, ಭೃತ, ಅವನು ಕೆಡಿಸಲು ।
ನೊಂದೆನಾದರು ಏರು ಕುದುರೆಯ ನೀಗಲೇ ಜಾಣ ॥ ೨೩ ॥
ಬೆಳಗುಹರಿಯುವ ಮುನ್ನ ಯೋಜನ ।
ಗಳಿದು ಸಾಗಲು ಮೂವರಿಗೆ ಬಲು ।
ಯೊಳಿತೆಲಾ ತಿಳಿಯಿದನುಮೆನೆ ಭೃತ ನಂಬಿದನು ಮತ್ತೆ ॥
ಬಳುಕಿ ಬಾಗುತ್ತೆ ನಮಿಸಿ ಹಾಲಾ ।
ಹಲದಿ ಪುಟ್ಟಿದ ಹಾವುಗಳಿಗುರೆ ।
ಘೇಲನನುವಾಗಲ್ಕೆ ಹಿರಿದನು ಕೋಲುಕಡಿವಾಣ ॥ ೨೪ ॥
ಏರಿ ಸಾಗಿದನಂಗಣಕೆ ಭೃತ ।
ಮೂರು ಮೂರೆಡೆಗೊರಗಿ ನೋಡುತೆ ।
ನಾರಿ ಮೋಹಿನಿಯುದಯ ಗಾನವು ನೂಪುರದ ರವವು ॥

ಜಾರಬಹುದೇ ಕಿವಿಯೊಳಿನ್ನುತೆ ।
ಬಾರಿ ಬಾರಿಗೆ ಚಿಂತಿಸುತ್ತಿರೆ ।
ದೂರದೊಳ್ನೋಡಿದನು ಹರುಷದಿ ಮೋಹಿನಿಯ ಮುಖವ ॥೨೫॥

ನಲಿದು ಭೃತ ನಸುನಗುತಲಾಕೆಯು ।
ಕೆಲವ ಸಾರ್ದನು ಮೆಲ್ಲ ಮೆಲ್ಲನೆ ।
ಉಲಿದನತಿ ದುಃಖದಲಿ ಕಾಂತೆಗೆ ಪಯಣಸುದ್ದಿಯನು ॥

ಎಲಗೆ ನಿನ್ನನು ತೊಲಗಿ ಪೋಗುವ ।
ಕಲಿಯು ಕಾಲಕೆ ನಿನ್ನ ನೋಟವು ।
ನಿಲುಕುವುದೆ ನನಗೆಂದು ಬೆಂದೊಡಮೀಗ ಮುಂದರಿವೆ ॥ ೨೬ ॥

ಗಳಿಗೆ ವರೆಯುವಿಯೋಗ ದುಃಖವ- ।
ಬಳಿಯೊಳಗೆ ದುಸ್ಸಹವು ತಾನಿರೆ ।
ಕಳಿವುದೆಂತಿನ್ನಖಿಲ ಕಾಲವ ನೀನು ದೂರಾಗೆ ॥

ಕಳಿದು ಗಡ ಸಂಶಯದ ಕತ್ತಲೆ ।
ಸೆಳೆಯುವಾ ನಾವ್ ಸುಖದಸೂರ್ಯನ- ।
ನುಳಿಯೆ ನೀನಿಲ್ಲೆಂದು ಭೃತನನೆ ಮುದದಿ ತಿರುಗಿದಳು ॥ ೨೭ ॥

ಘಾತಕರು ನರಬಲಿಯ ವಿಷಯಕೆ ।
ಕಾತರವ ಬಡುತಿರಲು ಭೃತನತಿ ।
ನೂತನನುರಾಗಾನುಭವಹರುಷವನು ಪೊಂದಿದನು ॥

ವೀತಿ[5]ವೇಗಕೆ ಹಿಂದೆ ಜಾರುವ ।
ಭೂತಲದ ಸೌಂದರ್ಯಸಕಲವ ।
ಕೌತುಕದಿ ಭೃತ ನೋಡಿ ಹಿಗ್ಗುವನವರು ಬಾಡುವರು ॥ ೨೮ ॥

---

5. ಕುದುರೆ.

ಯೋಜನವ ಹಿಂದೂಡಿ ಪೊಕ್ಕರು ।
ಮೂಜನರು ನಿಬಿಡಾದ ಕಾಡನು ।
ಗೋ[6]ಜನರಿಯದ ಭೃತನ ಕೊಂದರು ಕಪಟಿಸೋದರರು ॥
ಮಾಜಿದಸಿಯನು ತೊಳೆದು ನೀರೊಳು ।
ವಾಜಿಯನು ತವಕದಲಿ ಹೊಡೆವರು ।
ಸೋಜಿಗವ ಬಡುತೈದೆ ನೀಚರು ಮನೆಯ ಹಾದಿಯಲಿ ॥ ೨೯ ॥

ಭೃತನ ಸೌಖ್ಯದ ಚರಿತವಿಂತೀ ।
ಕೃತಿಯೊಳಂತವ ಪೊಂದಲವನಿಗೆ ।
ಸೃತಿಯ ಬಂಧವು ಗ[7]ತಿಸಿದಕೆ ಸದ್ಗತಿಯು ಸುಖಮುಂಟೇ ॥
ಭೃತನುಳಿದು ಸೋದರರು ಬಂದಿರೆ ।
ಖತಿವಳಿದ ಮೋಹಿನಿಯ ಶಾಂತಿಗೆ ।
ವಿತಥವನು ಪೇಳಿದರು ಪೋಗಿಹನೆಂದು ಪರಪುರಕೆ ॥ ೩೦ ॥

ಒಡೆಯನನು ನೀಂ ನೋಡುವಾಸೆಯ ।
ಗೊಡವೆಯನು ಬಿಡು ಬಡವೆ ಮೋಹಿನಿ ।
ತೊಡು ನಡಿಯೆ ನೀಂ ವಿರಹವೇಷವ ನಾಳೆಯೊಂದೆನಬೆ ॥
ಕಡುವೆ ಹಳಹಳಗೈದು ಶೋಕವ ।
ತಡೆದಳವಳಾದಿನದ ಹಗಲೊಳು ।
ಕಡೆಗೆ ಭೃತನಾಶೆಯನು ತೊಲಗುತೆ ಸೊಗವ ದೂಡಿದಳು ॥ ೩೧ ॥

ರಮಣನನು ನೋಳ್ಪಂತೆ ಯಾಕೆಯು ।
ತನುದೊಳಸನನು ನೆರಳಿ ಕರೆಯುತೆ ।
ಮಮತೆಯಲಿ ಕೇವನ್ನು ಚಾಚುತ್ತಾವಚುವಳು ಮರುಳೆ ॥

---

6. ಕಾರಣವನ್ನು. 7. ಸಾಯಲಾಗಿ.

ನಿಮಿಷವೊಂದಕೆ ತನ್ನ ವಿಷಯ- ।
ಭ್ರಮವ ಹರಿದಳು ಮನದಿ ಧರಿಸಿ ।
ಭ್ರಮಣದಲಿ ಕಾಂತಂಗೆ ಸುಖವಿಲ್ಲೆಂಬ ಕಲ್ಪನೆಯ ॥ ೩೨ ॥
ವನಿತೆ ದಿನದಿನದಲ್ಲಿ ನವೆದಳು ।
ಕೊನೆಗೆ ರೂಪವು ವಿಕಲವಾಯಿತು ।
ಬನಸಿರಿಯು ಬರಲಾಗುವಂತೆಯೆ ಚಳಿಯಕಾಲಕ್ಕೆ ॥
ಮನದೊಡೆಯ ಭೃತವಾಸವಾದರು ।
ಮನೆಗೆ ಬರದಿರೆ ಸೊರಗಿದಬಲೆಯು ।
ವಿನಯದಿಂ ದೂರಿದಳು ನಗೆತಂದಳುವ ಮೊಗದಲ್ಲಿ ॥ ೩೩ ॥
ಮರಳಿ ಬಾರನು ಅಣ್ಣಗಳಿರಾ ।
ಪರನು ಸೇವಕನಿನ್ನು ವರೆಗಂ ।
ಪಿರಿದುದೆಂತುಜ್ಜಗವು ತರಬುವುದವನ ಬರುವಿಕೆಯ ॥
ಮೊರೆಯನಿದನಾಲಿಸದೆ ದುಷ್ಟರು ।
ಹರಡಿಪರು ಕಡುಪುಸಿಯ ಜಾಲವ ।
ಮರುಗುವರು ಸೋದರಳ ಬಾಳ್ವೆಗೆ ಬೆದರಿ ತಮ್ಮಘಕೆ ॥ ೩೪ ॥
ಸೋದರಂದಿರ ಕಾಕುಕಾರ್ಯದ ।
ಬೋಧವಿರದಳಿದವಳೆ ಮೋಹಿನಿ ।
ವಾದನಿಲ್ಲದೆ ಘೋರವಾದಾ ನೋಟವನು ಬಿಡಲು ॥
ವೇದನೆಯ ಬೇನಿಷ್ಟನರಿಯಲು ।
ಕಾದವನಿಗೆ ಖಡ್ಗವಿರಿಯಲು ।
ಆದಯೂತನೆ ಯಡಗಿಪಂತೆಯೆ ನೊಂದಳಾಬಾಲೆ । ೩೫ ॥
ಕರಪುಗುಂಪಿದ ಕಾಡಲೊಂದಿಗೆ ।
ನೆರೆಗಟ್ಟಿದ ತುಟಿಗಳೊಂದಿಗೆ ।
ತೊರೆದ ಮಾಧುರ್ಯವನು ತೋರಲು ದಣಿಸ ಮನಿಗೂಡಿ ॥

ಸುರಿವ ಕಂಬನಿಯಿಂದ ಕೆಂಪೇ- ।
ರಿರಲು ತೆರೆದಾ ಕಣ್ಗಳೊಂದಿಗೆ ।
ಬರುವ ಭೃತನಾಕೃತಿಯಃ ಕಂಡಳು ನಿದ್ರೆಯಲಿ ತರುಣಿ ॥ ೩೬ ॥
ಬಂದ ಭೂತವು ಕಥಿಸಿತವಳಿಗೆ ।
ಸಂದ ತನ್ನಯ ಕೊಲೆಯ ವಾರ್ತೆಯ ।
ಕೊಂದ ಸೋದರರಂತರಂಗದ ಕಹಿಯ ಹೊರಗೆಡವಿ ॥
" ಚೆಂದದಿಂ ಮಲಗಿಹೆನು ಮೋಹಿನಿ ।
ಜೆಂದು ಬೂದಿಯ ಪರಿಯೊಳಿನ್ನುಂ ।
ಸುಂದರಿಯೆ ಬಂದೊಂದು ಕಂಬನಿಯಿಂದೆ ತಂಗೈಸೆ " ॥ ೩೭ ॥
" ಅಕಟಕಟ ನಾಂ ಗಾಳಿಯಾದೆನು ।
ಮುಕುತಿಯಾಯಿತು ಜೀವಕೋಟಿ- ।
ದಖಿಲವನವದು ಕೀಸಾಡುತಿರೆ ಭಜಿಪೆ ಮೌನದಲಿ ॥
ವಿಕಚ ಪುಷ್ಪವು ಪೂರ್ಣಚಂದ್ರನು ।
ನಿಕಟ ದೇವಾಲಯದ ಗಂಟೆಯು !
ಪ್ರಕಟ ಮಾಳ್ಪವವೆನ್ನ ಗೋಳನು ಸಾವು ಬೇರಿರಲು " । ೩೮ ॥
" ಗತಿಸಿದನು ನಾಂ ಬಲ್ಲೆ ನಡೆವುದ ।
ಶ್ರುತಿಸಬಲ್ಲೆನು ಮೂಢನೆನಿಸದೆ ।
ಸತಿಯೆ ಭೌತಿಕ ಸುಖವು ಮರೆತರು ನೀನು ಸುಖಗೊಡುವೆ ॥
ಸ್ಮೃತಿಯು ಕೆಡಿಸುವ ನಿನ್ನ ತನುಕಾಂ- ।
ತ್ಯತಿಶಯವದಪ್ಸರೆಗೆ ಬಾರದು ।
ಕೃತಕವಲ್ಲಿದು ನೀನು ಶೃಂಗಾರಾಧಿದೇವತೆಯು " । ೩೯ ॥
ಹೇಳುವುದು ಮುಗಿಯುತಲೆ ತೆರಳಿತು ।
ಗಾಳಿಯಾಯಿತು ಕಂಡ ಭೂತವು ।
ತಾಳದಂಜಿಕೆಯಿಂದಲೆದ್ದಳು ಚೆಲುವಿ ಮೋಹಿನಿಯು ॥

ಬೇ[8]ಳೆಗೆಡಿಸುವ ಹಾಳು ಬಗೆಯಲಿ ।
ಕಾಲವೆಲ್ಲವ ಕಳೆದು ನಿಶಿಯೊಳು ।
ಬೀಳೆ ಹಾಸಿನ ಮೇಲೆ ಕಾಣುವ ಕನಸಿಗಗಿ[9]ದಂತೆ ॥ ೪೦ ॥

“ ಏನುಗತಿಯಿದು ಪ್ರಾಣನಾಥನೆ ।
ದೀನರೊಳು ನೀಂ ದೀನನಾದ್ಯೆ ।
ಹೀನವಿಧಿಯಾಟವದು ಭೃತನ ಪಯಣವು ಸರಿಯಾಯ್ತು ॥

ದಾನವದ್ವಯದಾಟವೆಂದಿದು ।
ನೀನು ಕಣ್ದೆರೆಸಿರಲು ನಿನ್ನಯ ।
ಕಾನನದಿ ನಿಜದಶೆಯ ಶೋಧಿಪೆನೆಂ” ದಳಾ ಬಾಲೆ ॥ ೪೧ ॥

ಕಾಡಿಗೋಡುವ ಕಳುವ ಮುಚ್ಚಲು ।
ಕಂಡ ಕನಸಿನ ನಿಜವ ತಿಳಿಯಲು ।
ಮುಂಡಿಸಲು ಬಲುಜಲಿಯ ಬೂದಿಯ ಗೈದು ನಿಶ್ಚಯವ ॥

ಝೂಡಿ ಮುದಿಹೇಂಗಳಿಯ ನಡೆದಳು ।
ಪೂಡುತಲೆ ಶೋಧನೆಯ ಕಷ್ಟದಿ ।
ನೋಡಿದಳು ಸಂಜೆಯಲಿ ತನ್ನಯ ಭೃತನ ಶೇಷವನು ॥ ೪೨ ॥

ತಲೆಯ ಬುರುಡೆಯ ಕಾಲ,ಕೈಗಳ- ।
ನೆಲುವುಗಳನುಳಿದಿರ್ದ ಪಕ್ಕದಿ ।
ಹೊಲಸಿರುವೆ ಹೇನಾಣ ಹುರಿ ಸಿದಿಗೆಗಳ ಮುಡಿಕೆಗಳ ॥

ಎಳೆಯೆದೆಯ ಬಾಲಕರು ಕಂಡರೆ ।
ಹಲುಬುದೆಲ್ಲವು ತಿಳಿಸು ನೋಡಲು ।
ಕಲುಮಧುರ ಗಾನವಲೆ ಮೋಹಿನಿ ಶೋಕವೆಂತಹದೊ ॥ ೪೩ ॥

---

8. ಬಳಲಿಸುವ. 9. ಬೆದರಿದಂತೆ.

ನೋಡುತಲೆ ಮನಗಂಡು ಪಾಪಿಯು ।
ದೂಡಿ ಬಳಸಿರ್ದೆಲ್ಲ ದುಃಖವ ।
ಹೂಡಿ ಕಣ್ಗಳ ಹುಡುಕಿದಳು ಹೂಳಿಟ್ಟ ಜೀವನವೊಲ್ ॥
ಮೂಢುತಲೆ ಆ ಸ್ಥಾನ ಮಹಿಮೆಯು ।
ಕಾಡಿನೊಳು ಬೆಳೆದಿರ್ದ ಪೂವೆನೆ ।
ಕಂಡಳಲ್ಲವೆ ಬಾಲೆ ಅರಳಿದ್ದಮಿತ ರುಚಿಯೊಡೆದು ॥ ೪೪ ॥
ಕಟ್ಟ ಸೆರಗನು ಟೊಂಕಸುತ್ತಲೆ ।
ಸಟ್ಟ ಭೃತನಸ್ಥಿಯನು ಹುಡುಕುವ ।
ದಿಟ್ಟ ಮೋಹಿನಿಯುಳಿಗೆ ಪಟ್ಟುಸಿರಿಟ್ಟಳಾದಾಸಿ ॥
ಅಟ್ಟ ಭಯಮೂಯೆಗಳನೀರ್ವರು ।
ಒಟ್ಟಿದರು ಶ್ರಮಬಟ್ಟು ಸಕಲವ- ।
ನಟ್ಟಹಾಸವ ತೋರುವಂತೆಯೆ ನಷ್ಟಕಾರ್ಯದಲಿ । ೪೫ ॥
ಶ್ರಮವಿಪಾಕವ ಕಂಡು ತರುಣಿಯು ।
ಬೆಮರಿ ಬಾಯಾರೊರಗಿ ಭೂಮಿಗೆ ।
ಯಮುನೆವೆರಸು ನೀರಾಗುವಂತೆಯೆ ರೋದಿಸಿದಳಕಟ ॥
ಅಮರಸಿಲ್ಲದ ಹಾಳುದೇಗುಲ ।
ಸಮವೆನಿಪ ಭೃತನಂಗಶೇಷಕೆ ।
ನಮಿಸುತವನಾ ಪ್ರೇಮದಕ್ಷಯುವನ್ನು ಸಮನಿಪಳು ॥ ೪೬ ॥
ಶಿರವನುಳಿದೆಲ್ಲವನು ಬಕುತಿಯೊ- ।
ಳೊರಗಿಸುತೆ ಭೂದರದಿ ಭರದಿಂ ।
ತಿರುಗಿದಳು ಮನೆಗೆಂದು ತಂದುವ ಮುಚ್ಚಿ ಕಾಯುಲ್ಕೆ ॥
ಭರದಿಸೇರುತ ತನ್ನ ಸದನವ- ।
ನಿರಿಸಿದಳು ತಂದುದನು ಪೀಠದಿ ।
ಪಿರಿದ ಮನ್ನಣೆಯಿಂದ ನೆನೆಯುತ್ತಪರ ದೊರೆಯುನ್ನು ॥ ೪೭ ॥

ಸರಸಪರಿಮಳ ಗಂಧಗಳ ಶೀ- ।
ಡರಪಿಸುತೆ ಕುಸುಮಗಳನಾಶಿರ- ।
ಕೆರಗಿ ಸುಪ್ರೇಮದಲಿ ವಿಧಿಸಿದಳದಕೆ ವಿಶ್ರಮವ ॥

ದುರುಳಬಾಂಧವರರಿಯುದಂತೆಯೆ ।
ನೆರೆಯೊಳಡಗಿಸಿ ಶಿರವನಲ್ಲಿಯೆ ।
ನಿಲಿಸಿದಳು ಚೆಲುವಾದ ವೃಂದಾವನವ ಮೋಹಿನಿಯು ॥ ೪೮ ॥

ಪರಿ ಪರಿಯೊಳನುದಿನವು ದೊರೆಯುವ ।
ಕರುಣ-ಶಿಶು-ಮೋಹಿನಿಯ ಕಂಬನಿ ।
ಜರೆಗೆ ಜಿಳಿದಿತು ಮಧುರ ತುಲಸಿಯು ಚಂದ್ರಕಲೆಯಂತೆ ॥

ಮರೆತಳ್ಕೆ ಕಾಲಾನುಕಾಲಕೆ ।
ಧರೆಯ ಸೌಂದರ್ಯದ ವಿಲಾಸವ ।
ತೊರೆದಳಯ್ಯೋ, ನೀರೆ, ರವಿಶಶಿಸ್ಮರಣವನು ಕೂಡ ॥ ೪೯ ॥

ಇರುವುದೇಯೊಳಿತೆಂದು ಭಾವಿಸಿ ।
ಸೊರಗಿ ಸಾಯುವ ಮೋಹಿನಿಯ ಗತಿ ।
ಯರಿಕೆ ಸಾಕೆಂದೋಸರಿಸದಲೆ ಅಯ್ಯೊ ಚಿತ್ರೈಸು ॥

ಸುರಿಸುರಿದು ರಕ್ತವನು ಕೊಬ್ಬಿದ ।
ಹರಿಯ ಶೋಣಿತ[10]ದಂಷ್ಟ್ರನೆಡಹಿದ ।
ಸುರಭಿಯವಸ್ಥೆಯನು ಚಿಂತಿಸೊ ಗಟ್ಟಿಮನವಾಡಿ ॥ ೫೦ ॥

ಸ್ಫುರಿಸಲಿ ಸಂತಾಪವಹ್ನಿಯೆ ।
ದೂರ ನಡೆ ವೈಷಾದರಾಗವೆ ।
ತಾರೆಯೊ ಮನವೇ ಹೇಗಲಾಪರು ಸುಜನಕವಚನನು ॥

---

10. ಕೆಂಪು.

ಸ್ಮರನುಬಣೆವಿಗಳ ರವಿಸಿ ।
ಮರೆದಿಂತುಂ ಸ್ಮಿತದ ಭಾಸದ ।
ಚಾರುಮೋಹಿನಿ ಮಿಱಿ ಕೈಯನು ಪೋಸಗೊನಿತದೊಳು ॥ ೫೧ ॥

ನೋಡಲ್ಮಂದರ ಪಾರಿಜಾತದ್ರುಮಮುಂ ಗೌರವ್ಯಮುಂ ಶೀಡುವಾ ।
ಕೊಂಡಾಡುತ್ತಲದಂ ವಿಹಾರಿಜನಗಳ್ ಮುಂದಾದ ಪುಷ್ಪಂಗಳಿಂ ॥
ಜೊತೆಯಾಗಲ್ಲಿ ತೊಡರ್ದನೇ ಹತಕ್ಕೃತಾಧಾತ್ರಿಶೃಂಗಮಂ ಜೀವಮಾ ।
ಗಾಧಾಧಾರವ ಖಂಡಿಸಲ್ ಜಗಿಸಳಿಂ ಕಾಂತಾಮಣಿ
ಮೋಹಿನಿ ॥ ೫೨ ॥

ಭೂಪಾಲನೇರಿದ ಮುತ್ತಿನಂತೆ ಜೊಳೆವಾ ಲಾವಣ್ಯಮುಂ ರೂಪಮುಂ ।
ಪಿಂಪಿಂ ಜೌವನವನ್ನು ತಾಳ್ದ ಯುವತೀ ಕಾಂತಾರದೊಳ್ ಕ್ಲ್ಯಿವಳಿ ॥
ದೀಪಕ್ಕೆತ್ತಿದವಂತೆ ಕುಂದುತಿಹಳಿಂತೆಂದಂತೆ ಪಾರಂಪ್ರಿಯರ್ ।
ಕೋಪಂ ದೀರ್ಘಮದಿತ್ತ ಬಾಂಧವರೊಳು ನಿರ್ಗರ್ಣ್ಣವಾ
ತಂಗಿರೊಳ್ ॥ ೫೩ ॥

ಆ ವೃಂದಾವನಮೇನು ಮತ್ತವರೊಳು ಬೆಳ್ಳಗ ಪುಷ್ಪಮಂಗಳೆಂ ।
ಸಾವೊಂದಾಗದೆ ತಾನು ಕಂಬನಿಗಳಂ ಸಾಕುತ್ತ ಕುಳ್ಳಿರ್ದಳಿಂ ॥
ಜೀವಂ ಬೇಸರವಾದುದೇಕೆ ಧೃತನಿಂ ಕಾಣ್ಬಲ್ಲನೇ ನಿದ್ರೆಯೊಳ್ ।
ಸರ್ವಂ ತೊಱೆದರಲ್ ಮರಾಗ್ರಹಿಗಳಿಂ ಹೋಗಾದರುಂ
ಕಾಣುವರ್ ॥ ೫೪ ॥

ಜೀವಂ ಮೋಹಿನಿಯುಕ್ಕೆಯಾದ ಗತಮಂ ಕೊಟ್ಟಿಲ್ಲ ಶ್ರುತಿಯ
ಪಾಯದು ।
ರಾವಣಕಾರಲವಸಂ ನೃಥಾ ಧೃತಸತೀ ದೇವಾರ್ಜನಾಭ್ರಷ್ಟಳು ॥
ಸರ್ವಾಗ್ನಿಕೆಯು ದೇಹಮುಂ ಪರಿಯುತಾ ವೃಂದಾವನಸ್ಥಾನದೊಳ್ ।
ಸೇವಾಶಕ್ತ ರಸಾವಳಾಕೆ ವಿಹಗಂ ಕಾಪಿನ್ನುದೇಯುಂತೆ ಪಲ್ ॥ ೫೫ ॥

ಪೇಗೊಳ್ ಕದ್ದರು ಪೋಸದಿಂ ತುಲಸಿಯುಂ ಕಂದರ್ಪನಾ
ಸ್ಥೈರ್ಯದೊಳ್ ।
ಬೇಗಾಡಂಬರದಲ್ಲಿ ಪಲ್ಲವಿಸುವಾ ಕಾಂಗಂ ದಯಾದೃಷ್ಟಿಗಳ್ ॥
ಭಂಗಂ ಬಂದೊಡೆ ತಪ್ಪುಗುಟ್ಟುಗುವ ವರ್ಜಾರಿತ್ತ್ಯ ಕಾಲಿನ್ದರಿಸಿ ।
ತಾಂ ಗೋಳಾಡಿದಳತ್ತ ಪೋಚಿಸಿ ಹಿರಾಧರಂ ದುರಾಪಾಗಲು । ೫೬ ॥
ಕಾವೇರ್ದಂಗಳ ಚಾತಕಾ ಬಯಸಿ ತಾಂ ಜೆಂಡಾಗಿ ಶುಭಾಭ್ರಮಂ ।
ಕಣ್ಪಿರ್ಂದಂ ನೆರೆ ನೋಡೆ ವಕ್ರಗಾದನಂ ಚೆಲ್ವಾಗಿ ಮುಖಾಬ್ಜದಂ ॥
ಅಮರ್ಂದಿನ್ನಳಲೀನು ಪೋಚಿಸಿ ಪಳಂ ಕಾರ್ಯಬ್ಬಿಲ್ಲರೇ
ಧಾತ್ರಿಯೊಳ್ ।
ಧರ್ಮಂ ಸಲ್ಲದ ಗಾಳಿ ರಿಂದಿಸಿದರಿಂ ಕಾಂತೆಯೆ ತಾಂ
ರಂಜಿಸಂ ॥ ೫೭ ॥

11
ಆತಾರ್ತಿಗೆ ಕಣ್ಗಳಂ ಕುಸುಮಂ ದೇವರ್ಗೆ ಭಾಳಾಂಕಮಂ ।
ನೀಸರ್ಗಂ ಸುರ ಪೋಚಿಸಿ ಕರತಲಾರವಿಂದಮ್ಯವಕ್ಷೋಜಮಂ ।
ಶ್ರೀ ಬೌದ್ಧಿತ ನಾಭಿಜಾತ್ಯ ಕಟಿಯುಂ ಸಗ್ಗಾನೆಗಂ ಕೆಮ್ಮೀಶನಂ ।
ಸುನೇವ್ಯಾಂಘ್ರಿ ಸರೋರುಹಾ ಯುಗಲಮುಂ ಶ್ರೀದೇವಿ
ಗತ್ತಳ್ಯಕಾ । ೫೮ ॥

12
ಮಂದಮಾರನದರ್ಪ ಭೂಧರನಂ ಸಣ್ಣದ ಚಂದ್ರಂಗೆ ನಾಂ ।
ಪ್ರಾಪ್ತಿಪೆಂ ನಿಜದೇಹಮೊಂದೊಲವಿಂ ಕೊಟ್ಟಿರ್ದದೇ ಗೈದಿಂಸೋ ॥

---

11. ತನ್ನ ಪ್ರತಿಯೊಂದು ಅಂಗವನ್ನು ಪೋಚಿಸಿಯು ಬೇರೆ ಬೇರೆ ದೇವರಿಗೆ ಯೋಗ್ಯವಾಗುವಂತೆ ಕೊಟ್ಟುಬಿಟ್ಟಳು; ಅದ ಕಾರಣ ಮದನನಿಗೆ ಅವಳ ಕಣ್ಣುಗಳು ಹಂಚಹೋದುವು; ಅದನ್ನೇ ಅವನು ಬಾಣ ದಂತೆ ಉಪಯೋಗಿಸುತ್ತಿದನು. ಇತ್ಯಾದಿ. 12. ತನ್ನ ಪಾಲಿಗೆ ಬಂದು ದನ್ನು ಚಂದ್ರನು ಕಳೆದುಕೊಳ್ಳಲಾಗಿ ಸ್ತ್ರೀಯು ಅವನಿಗೆ ತನ್ನ ಪಾಲಿಗೆ ಬಂದ ಕಾರುಣ್ಯವನ್ನು ಕೊಡಹೋದಳು. ಈ ಪ್ರಕಾರ ಪೋಚಿಸಿಯು ಜಗ್ಗ ಲೋಕವು ಜಗತ್ತಿನಲ್ಲೆಲ್ಲ ಹಬ್ಬಿಕೊಂಡಿತು.

ಬೇರೊಂದಂ ಬಡಮೋಹಿನೀಯುಲರಿಯಳ್ ಕೈಕೊಳ್ಳ
ನಾಂ ಪೊಂದಿದಾ ।
ಕಾರುಣ್ಯೈಕವನೊಂದಲಾಗಿಕೆ ಜಗಂ ಗೋಳಿಟ್ಟುದೇಂ ಪೇಳಲಿ।೫೯॥
ಈ ಲೋಕವೇ ಪ್ರಣಯಘಾತಕವೆಂಬ ಭಾವಂ ।
ತ್ರೈಲೋಕಮಂ ಚಕಿಸುವಂತೆ ವಿನಷ್ಟನಾರಿ ॥
ಸಲ್ಲೀಲೆಯಿಂ ಬಿರೆಸಿ ಸಗ್ಗದಿ ಗಂಡನಂ ತಾಂ ।
ಮೇಲಾದಳೈ ಯುಮನಿಗಂಜದ ಬಾಲೆಯಳ್ಗೆ । ೬೦ ॥

ದ್ವೇಷಭಾಂಡಾರ ನಾಟಕದೊಳಗಿನ ಪದಗಳು.

ರಾಗ ಯಮನ. ತಾಳ ತ್ರಿತಾಳ. "ಟಕಮುಕ ಪಾಹಿ" ಎಂಬಂತೆ.

ಜಯ ಜಯ ವೀರಾ ಶೂರಶರಭ ಜಯ ವೈರಿವೀರ್ಯಹರ ।
ಕಾರ್ಯಧುರೀಣ ಪರಮುದಯಾಳು ರಾಯ ರಾಯ ಬಾ ॥ ಪ ॥
ನಯವಿದಾಕಾರಾಲಂಕಾರ ರಾಜಗುಣಸಾರ ।
ಭಾಗ್ಯಶಾಲಿ ಪ್ರಾಣಕಾಂತನೆ ಬಾ ॥ ೧ ॥

ರಾಗ ಖಮಾಜ ಜಿಲ್ಲಾ. "ಲಾವಿ ಚಟಕ ಗುಣಗಾನಾ" ಎಂಬಂತೆ.

ಪ್ರಿಯಾ ಇರಲಿ ದೃಢಭಾವ। ಜಯಧಾಮ ॥ ಪ ॥
ನವಯುವತಿಗೆ ಧವ– । ನವಾನುಭವದಿಹ ।
ಜವಗೇಡಿತನವು ಬೇಡ ॥ ೧ ॥ ಜಯಧಾಮ ।
ತನುವನು ಪೊಡಲೊಳು । ಸಮನಿಸಿ ವಾಸರ ।
ರಮಣೀಯಕವಿನನಿಂದೆ ॥ ೨ ॥ ಜಯಧಾಮ ।

೧೦.

ಯಜ್ಞಕುಂಡ.

[ಸನ್ ೧೯೨೪ ನೆಯ ವರ್ಷ ಬೆಳಗಾವಿಯಲ್ಲಿ ನೆರೆದ ರಾಷ್ಟ್ರೀಯ ಮಹಾಸಭೆಯನ್ನು ನೋಡಲಿಕ್ಕೆಂದು ನನ್ನ ಮಿತ್ರರಲ್ಲಿ ಅನೇಕರು ಹೋದರು; ನನಗೂ ಹೋಗಲಿಕ್ಕೆ ಆಗ್ರಹಮಾಡಿದರು. ಆದರೆ ಕೆಲವು ಕಾರಣಗಳ ಮೂಲಕ ನನಗೆ ಹೋಗುವುದಾಗಲಿಲ್ಲ; ಮನಸ್ಸಿಗೆ ಅತ್ಯಂತ ಖೇದವಾಯಿತು. ಕಾಂಗ್ರೆಸ್ಸನ್ನು ನೋಡದಿದ್ದರಿಲ್ಲ ; ಅದರ ಧ್ಯಾನವನ್ನಾದರೂ ಮಾಡಿ ತೃಪ್ತನಾಗಬೇಕು ಎಂಬ ಉದ್ದೇಶದಿಂದ ವಿಚಾರಮಾಡತೊಡಗಿದೆನು. ಆಗ ಈ ಕವಿತೆಯ ಜನನವಾಯಿತು. ಇದರಲ್ಲಿ ನಾನು ನನ್ನ ಚಿತ್ತಕ್ಕೆ ವ್ಯಥೆಗೊಡುತ್ತಿದ್ದ ವಿಷಯಗಳನ್ನೆಲ್ಲ ಸೇರಿಸಿರುವೆನು. ಜಗತ್ತಿನಲ್ಲಿ ಎಲ್ಲ ಕಡೆಗೂ ನೆಲೆಗೊಂಡ ಪಾರಮಾರ್ಥಿಕರಹಿತವಾದ ಔದಾಸೀನ್ಯಯುಕ್ತ ಜೀವನಕ್ರಮ, ನಿರ್ಧರ್ಮ-ಬುದ್ಧಿ, ವಿಷಯಭೋಗಲಾಲಸೆ, ಅಂತರ್ನಿರೀಕ್ಷಣೆಯಿಲ್ಲದೆ ಇಂದ್ರಿಯಸುಖಾಭಿಲಾಷೆಯಿಂದ ನಡೆದ ಐಹಿಕಪ್ರಗತಿಪ್ರಪಂಚ ಇವೇ ಮೊದಲಾದುವುಗಳು ಎಂಥ ಕಠಿಣ ಹೃದಯವನ್ನಾದರೂ ಕರಗಿಸುವಂತೆ ಸರ್ವವಿನಾಶ ಮೂಲವಾಗಿ ಪ್ರಕಟಗೊಳ್ಳುತ್ತಲಿರುವುವು. ದೈವಿಕ ಅಥವಾ ಆಧ್ಯಾತ್ಮಿಕ ಪ್ರಕಾಶವಿಲ್ಲದೆ ಕೇವಲ ಬುದ್ಧಿಬಲದ ಮೇಲೆ ವಿಶ್ವಾಸವನ್ನಿಟ್ಟು ಸದ್ಯಸ್ಕಾಲದಲ್ಲಿ ಎಲ್ಲ ಕಾರ್ಯಗಳೂ ನಡೆದಿರುತ್ತವೆ; ಆದರೆ ಅವುಗಳಿಗೆ ಸಿದ್ಧಿಯುಂಟಾಗುವಂತೆ ಕಾಣಿಸುವುದಿಲ್ಲ. ನಮ್ಮ ಜನರಲ್ಲಿ ಇದೇ ಸ್ಥಿತಿಯಿರುವುದು. ನಾವಾದರೂ ಬೌದ್ಧಿಕ - ಬಲವನ್ನೇ ಅನುಸರಿಸಿ ಪರಕೀಯರನ್ನು ಸರಿಗಟ್ಟಬೇಕಾಗಿದೆ. ಈ ಪ್ರಸಂಗದಲ್ಲಿ ನಾವು ಹಳೆಯದನ್ನು ಹಳಿದು ಚೆಲ್ಲಿಕೊಡತಕ್ಕದ್ದಲ್ಲ. ಹೊಸದಾದುದನ್ನು ಅತ್ಯವಶ್ಯಕವೆಂದು ಭಾವಿಸಿ, ಪರೀಕ್ಷಿಸಿ, ಸ್ವೀಕರಿಸಿ, ಸಾಧಿಸಿ, ಹೊಸದರ ಕೂಡ ಹಳೆಯದನ್ನು ಜೊತೆಗೊಳಿಸಬೇಕು. ಸದ್ಯಕ್ಕೆ ನಮಗೆ ಯೋಗ್ಯವಾಗಿದ್ದ ದೇಶೋದ್ಧಾರಕಾರ್ಯವನ್ನು ಬೌದ್ಧಿಕ ರೀತಿಯಿಂದ ಜರಗಿಸಬೇಕು; ದೇಶೋದ್ಧಾರಕ್ಕೆ ನಮ್ಮ ಸರ್ವಸ್ವವನ್ನು ಅರ್ಪಿಸಬೇಕು. ಆ ಬಳಿಕ ದೊರೆತ ಸಿದ್ಧಿಗೆ ಹಳೆಯದನ್ನು ಚೆನ್ನಾಗಿ ಸೇರಿಸಿ ಬಿಟ್ಟರೆ ಭರತಖಂಡದಲ್ಲಿ ಸ್ವ(ರ್ಗ)ರಾಜ್ಯವೇ ನೆಲೆಗೊಳ್ಳುವುದು

ಈ ಕವಿತೆಯು ಮೊದಲು "ಜಯಕರ್ನಾಟಕದಲ್ಲಿ" ಪ್ರಕಟವಾಗಿದ್ದಿತು.]

[1]ರವಿಯು ಕರಿಯಾಗುವನೆ ಚಂದ್ರ ಕಳೆಯೇರುವನೆ ।
ಅವನಿ ಮಳಲಾಗುವಳೆ ಜಲವು ಜಡವಾಗುವುದೆ ।
ಕವಿದ ಮೋಡಗಳು ಹೊಗೆಯಾಗುವುವೆ ಬೆತ್ತಿಗೆಯು ಹರಳಾಗಿ
ತಾನುಳಿವುದೆ ।
ಪವಿಯು ಗಿರಿಯುರಿವುದೇ ಬಡಬಶಿಖಿ ಶರಧಿಯಂ ।
ಸವಿಸುವುದೆ ಯುತ್ಪಾತಗಳು ಕೇಡ ತಂದಪುವೆ ।
ನೆವಮೇನೊ ಧರ್ಮಕರ್ಮಗಳಿಗೆನೆ ದೇವರೆಲ್ಲಿರ್ದಪರೊ
ದಂಡಿಸಲ್ಕೆ ॥ ೧ ॥

[2]ದನುಜರೆಲ್ಲಿಹರು ಭೂಸುತರನಪ್ಪಳಿಸುವರು ।
ಕನಿಕರವಬಟ್ಟುಳಿಪವೆಂಬ ಸುರರಿಹರೆಲ್ಲಿ ।
ಧನಕನಕಮುಂ ತೊರೆದು ಮನವ ನೆರೆಗೆಲ್ವ ಮಾರ್ಗವನೆ
ಪೇಳ್ವಯ್ಯರೆಲ್ಲಿ ॥
ತನುವ ಕಾಯಲ್ಕೆ ದೇವರ್ಗೆ ನೈವೇದ್ಯವೇ ।
ಜನತೆಯೊಳು ಬಾಳಲ್ಕೆ ಧರ್ಮನಿರ್ಬಂಧನವೆ ।
ದಿನದಿನಕೆ ಮಿತ್ತು ಮುಂದಿರ್ಪಾಗ ಸಾಯಲ್ಕೆ
ಸ್ವರ್ಗನರಕಂಗಳಿಹವೇ ॥ ೨ ॥

[2]ಹನನಭಯ ಮನುಜರಂ ಮೇರೆಯೊಳಗಿಟ್ಟಿಹುವು ।
ಕನಕಕಾಂಕ್ಷೆಯು ಚಿತ್ತಮುಂ ಸುತ್ತಿ ಪದುಳಿಪುದು ।
ನನೆದ ಕಾರ್ಯವ ಗೆಲ್ವ ಸೈತಿನೊಳು ತೆರೆಮುಸಗಿ
ಸಾಮಾಧಿಸೌಖ್ಯಪಿಹುದೈ ।

---

1. ಧರ್ಮಕರ್ಮಗಳನ್ನು ಬಿಟ್ಟರೆ ರವಿಯು ಕಪ್ಪಾಗುವುದಿಲ್ಲ
ಇತ್ಯಾದಿ. 2. ಪರಸ್ಪರ ಭಯದಿಂದ ನಾವು ಬಾಳಿ ಹೆರವರನ್ನು ಬಾಳಗೊ
ಡುವೆವು; ಬೇರೆ ಬಗೆಯ ಭಯದಿಂದ ಧರ್ಮನಿರ್ಬಂಧಾದಿಗಳನ್ನೇಕೆ
ಕಾಯಬೇಕು; ರಾಕ್ಷಸರ ಪೀಡೆ ಮುಂತಾದುದೆಲ್ಲ ಈಗ ಇಲ್ಲವೇ ಇಲ್ಲ.
ಅಂದ ಮೇಲೆ ದೇವರ ಸ್ಮರಣೆ ಮೊದಲಾದುವುಗಳೆಲ್ಲ ಏಕೆ ಬೇಕು? ಇ
ಬೇಕಾದುದನ್ನು ಪಡೆಯುವುದೇ ಒಂದು ಸರ್ವವ್ಯಾಪಕವಾದ ನಿಯಮವು.

ಇನಿತಿನಿತು ಬಿಡದೆ ಕೊರತೆಗಳ ಕಾಣ್ಬುದೆ ಧರ್ಮ– ।
ವೆನಿತೆನಿತುಮಂ ದೊರಕಿಪುದೆ ಪರಮ ಸತ್ಕರ್ಮ– ।
ವೆನಿತಾದೊಡಂ ಸಾಧಿಪುದೆ ಸರ್ವಸಂಮತಸುನೀತಿ
ಯೆಂಬರೆಲೆ ಮರ್ತ್ಯರು ॥ ೩ ॥

ಕಾಮಾದಿ ಶತ್ರುಗಳು ಮಿತ್ರರಾಗಿಹರಿಲ್ಲಿ ।
ಪ್ರೇಮಾದಿ ಭಾವಗಳು ಬೇಹಾರದೊಡನೆಯುಹ– ।
[3]ವಾಮಾತ್ಯಪದ ಮೀಗಬಂದಿಹುದು ಕಾಕುಕತ್ತರಿ–
ಗೆಲಸಕವಲ್ನುಡಿಗೆ ॥
ವ್ಯಾಮೋಹಮುಂಟಖಿಲಭೋಗಭೋಜ್ಯಗಳಲ್ಲಿ ।
ಸಾಮಾದ್ಯುಪಾಯಂಗಳೈದಿಹುವು ಕೊಳವಿಯಂ[4] ।
ಸಾಮಾನ್ಯರೆಳೆಯುವರ–ಸಾಮಾನ್ಯರೊತ್ತುವರು
ಲೋಕಮಂ ಕಾಳ್ಗಿಚ್ಚಿಗೆ ॥ ೪ ॥

ಹಳ್ಳಿ ಪಟ್ಟಣವಾಯ್ತು ಹಳ್ಳತಾ ಕೆರೆಯಾಯ್ತು ।
ಜೊಳ್ಳಾಯ್ತು ಹಳುವು ಹೊಲವಾಡೊಂ[5]ಜೊಲಾರಮೆಗೆ ।
ಮೆಳ್ಳೆಸಿತೀಗ ಗುಡುಸಲವಾಯ್ತು ಮಂದಿರವು ಬೀದೆಯಿಕ್ಕೆ
ಲದೊಳ್ಳೆಸೆ ॥

[6]ಕಳ್ಳನಂ ಸುಳ್ಳನಂ ಕೊರಚನಂ ಹುಚ್ಚನಂ ।
ತಲ್ಲಂಕಮುಳ್ಳೊಳ್ಳೆ ಕೊಳಕನಂ ಕೀಳನಂ ।
ಜೋಳಯಿಸಿ ಗತಿಗಡಿಸಿ ಕೂಡಿರಿಸಿ ಮನುಜಾತಿಗುನ್ನತಿಕೆ–
ತೋರ್ಪರೋವೋ ॥ ೫ ॥

---

3. ಕೆಟ್ಟ ಯುಕ್ತಿ, ಕಪಟಾಚಾರ, ಎರಡರ್ಥದ ಮಾತು ಇವೇ ಕಾರ್ಯ ಸಾಧಿಸುವ ಮುಖ್ಯ ಸಾಧನಗಳಾಗಿವೆ. 4. ಬಂದೂಕು. 5. ಆರಾಮದ ಸಲುವಾಗಿ ಹೊಲಗಳೆಲ್ಲ ಆಟದ ಸ್ಥಳಗಳಾದುವು. 6. ಕಳ್ಳರು ಮುಂತಾದವರನ್ನೂ ಸಮಾನ ನಾಗರಿಕತೆಯಿಂದ ಮನ್ನಿಸಿ ದೇಶೋನ್ನತಿಯ ಮಾಡಬೇಕೆನ್ನುವರು.

ಪೋಲಟ್ಟವಮಂ ಬಿಡರು ಬೆಟ್ಟ ಬಯಲಿಗೆ ಬರರು ।
ಹಾಳು ಬಚ್ಚಲ ಬಿಡರು ಹರಿವ ನದಿಯೊಳು ನಿಲರು ।
ಜಾಲಿಕಿಚ್ಚನೆ ಬಿಡರು ಸೂರ್ಯಸಂಕಾಶಕ್ಕೆ[7] ಹಾಸಿಗೆಯ
ಹುಲ್ಪಕ್ಕೆಗೆ ॥

ಕೀಳೂಟವಮಂ ಬಿಡರು ಹಾಲ ನರುವೋಗರಕೆ ।
ಸೂಳೆಕ್ರೀಟವ ಬಿಡರು ಮನೆಬಾಳ ಸೌಖ್ಯಕ್ಕೆ ।
ನಾಳೆ ಕೊಲ್ಲುವ ಬೇಟವಿಂದೀಗಲಾಂತು ಪೊತ್ತ[8]ಲೆಯೊಳಾ
ಸಿಪರಿಲ್ಲಮಂ । ೬ ॥

ಕಾದಾಡಿ ಸಾಯುವವರು ಕಾಣರೈ ಕಾರ್ಯವಮಂ ।
ಬಯ್ದಾಡಿ ದೂರುವವರು ಸತ್ಯಮಂ ತಿಳಿಯರೈ ।
ಇದ್ದುದನ್ನೊದ್ದು ದೂರದಕೆ ಕೈಯಿಕ್ಕೆ ಯೆಂದಾದೊಡಂ
ಸೊಗಮಪ್ಪುದೇ ॥

ಹಿಂದಾಗಲೊದೆಯುವವರು ಮುಂದಾಗೆ ಕೊಯ್ಯುವರ — ।
ದೊಂದಾಗಿ ಬಾಳರೈ ಬಿಡಿಯಾಗಿ ತಾಳರೈ ।
ನಿಂದಂತೆ ನೆರೆಯ ನೆಚ್ಚದೆ ಚಡಪಡಿಪ್ಪರೈ ತಿಪ್ಪಿಯಾ
ನಾಯಿಯಂತೆ ॥ ೭ ॥

ಆರ್ಯರಾ ಧರ್ಮವದು ಹಾಳಹಚ್ಚಡವಾಗುತ್ತು ।
ಪರ್ಯಾಯದಿಂ ಬಂದ ಪಾಶ್ಚಾತ್ಯಮಾರ್ಗವದು ।
ಪರ್ಯಾಪ್ತವಾಗಿಹುದು ದೇಹದೇವರ ಕಾರ್ಯಕೀಗ
ಚೆಂದೊಡವಿನಂತೆ ॥

---

7. ತೀಕ್ಷ್ಣಪ್ರಕಾಶ. 8. ತಮ್ಮ ಈ ಜನ್ಮದಲ್ಲಿಯೇ ಎಲ್ಲ ಸೌಖ್ಯವನ್ನೂ ಪಡೆಯಬೇಕೆಂಬ ಹವ್ಯಾಸದಲ್ಲಿ ಅಕಾಲಮರಣವನ್ನು ತಂದುಕೊಳ್ಳುವರು.

ಸೂರ್ಯನಾರಾಧನವು ಪಿತೃಗಣದ ತರ್ಪಣವು ।
ತಿರ್ಯಂಚಜಗಕೆ ಯಣಾರೇಣುಗಳಿಗನ್ನವುಂ ।
ಮರ್ಯಾದೆಯುಂ ಮೀರ್ದ ಮರುಳಾಟವಾಗೀಗ ರೋ[9]ಡಿಕೆಗೆ
ಪಕ್ಕಾಗಿವೆ ॥ ೮ ॥

ದೇವರಂ ಕಾಣಲ್ಕೆ ಹಿಂದು ಹರಕಾದನೈ ।
ದೇವರಂ ಕಾಣದಕೆ ಯವನು ತಿರುಕಾದನೈ ।
ದೇವರಂ ಮರೆದಿರ್ದ ದಾಂಭಿಕರಿಗಾಳಾಗಿ ಖೂಳಾಗಿ
ಬಾಯ್ಬಿಡುವನೈ ॥

ದೇವರಂ ಹಿಂದೊಗೆದು ದಾಯಾದರಂ ಕೂಡಿ ।
ದೇವರಂ ಕಣ್ಗೆಡಿಸಿ ದೈತ್ಯಸುಖವನೆ ಬೇಡಿ ।
ದೇವರಂ ಮುರಿಬಡಿದು[10] ದೇಹಸಚ್ಯುತವೆಂದು ಕನಸಿಂಗೆ
ಕಣ್ಬಿಡುವನೈ ॥

[11]ಸ್ವಪೂರ್ವೇವಗತ ಧರ್ಮಸುಕುಲಾಚಾರ- ।
ವಂಚಿತಾತ್ಮನು ಹಿಂದು ಕತ್ತಲೆಯ ಕರಿದೀಪ- ।
ಮಂ ಚಳಕದಿಂ ಕೊಂಡು ಕಣ್ಮುಚ್ಚಿ ಕುಣಿಯೊಳಗೆ ಕರಿ
ಮಣಿಯು ಕಾಣಬಯಸುವಂ ॥

ಆಚೆಯಾಚಾರಶೀಲ ವಿಚಾರ ಚೇತನಗ- ।
ಳೀಚೆಗಿವನೊಳು ಸೇರಿ ಹಳಿಯುವುಂ ಹಾಳಿಕ್ಕಿ ।
ಸಂಚಿತವೆ ಬಲವಂತವೆಂದು ತೋರುವ ಮುನ್ನ ಹಿಂದು
ವೇನಿಂದ್ರ[12]ನೇನು ॥ ೧೦ ॥

---

9. ತಿರಸ್ಕಾರ. 10. ಮುರಿತು. 11. ಸ್ವಕುಲಾಚಾರಾದಿಯನ್ನು ಬಿಟ್ಟು ಹಿಂದುವು ಪಡೆಯಲವಶ್ಯವಲ್ಲದ ಕ್ಷುಲ್ಲಕ ವಸ್ತುಗಳನ್ನು ಮೂಢ ಮಾರ್ಗದಿಂದ ಪಡೆಯನೋಡುತ್ತಾನೆ. 12. ಹಿಂದುವೂ ಇಂದ್ರನೂ ಅಷ್ಟೇ ದುರ್ಬಲರು.

ಹಿಂದುಮತ ಹದಗೆಡಲು ಬೇಕೇಕೆ ಪೊಂದಲಿ– ।
ಕ್ಕಂದವಲ್ಲದ ಧರ್ಮವಿಂದೇಕೆ ಲೋಕದೊಳು ।
ಸಂದವಾಗಿರ್ದ ಹಿಂದುವನನ್ನು ಬಹುರೂಪದಿಂ ಬಾಧಿ
ಪುದು ಬೇಕೆಲೋ ॥
ವೇದತತ್ವವ ನೀಗಿ ನೆರೆದ ನಡತೆಯ ಮೀರಿ ।
ನೊಂದು ಬೇಯುವುದೇಕೆ ಪ್ರಕೃತಿ[13] ಪುಸ್ತಕವಾಗಿ ।
ಮಂದಿಗಳ ಕರದಿ ಬೀಳುವುದೇಕೆ ಕಾಲನಾ ಯಜ್ಞಕುಂಡವ
ಮರೆತೆಯಾ ॥ ೧೧ ॥
ಉಗೆಯು ನೀರಾಗುವುದು ನೀರು ಮಂಜಾದಪುದು ।
ಬಗೆಯೆ, ಮಂಜೇ ನೀರಕಲ್ಲಾಗಿ ಕಾಣ್ಬುದೀ ।
ಬಗೆಯರಿತು ನೀನೊಲ್ಲೆನ್ನುವುದೆ ಮತ್ತೆ ನೀನೆ ಮುಚ್ಚಿ
ಕೆಡಿಸಬಹುದೇ ॥
[14]ಬಿಗಿದ ನೀರಿಂದು ಮಡುವಾಗೆ ಕಡು ಕೆಡುವುದೈ !
ವಿಗತಿಯಿಂ ತಿರುಗಣಿಯು ತಾನಾಗೆ ನುಂಗುವುದು ।
ಸಿಗುವ ಜೀವಿಗಳನ್ನು ನೀರಿಗದಕೇ ಪ್ರವಾಹವು ಸಿದ್ಧವಲ್ಲೆ
ಜೀಯಾ ॥ ೧೨ ॥
ಎಲೆ ಹಿಂದು ನೀಂ ಹರಿವ ನದಿಯೆಲಾ ಸ್ಥಳಪಡದೆ ।
ಯಲೆಯುವಾ ತೆರೆಗಳಿಗೆ ಮೆಯ್ಮರೆತು ತಡೆಯದಿರು ।
[15]ನಿಲವೆ ಯೋಡುವ ಪಥದೆ ನಿನಗೆ ಸಂಪೂರ್ಣ ಜೀವದ
ಬಲವು ದೊರೆಯುವುದು ಕಾಣ್ ॥

---

13. ಸೃಷ್ಟಿಯ ಗೂಢ ತತ್ವವು ಬೇರೆಯವರಿಗೆ ಏಕೆ ತಿಳಿಸು ಬರ ಬೇಕು ? (ಸ್ಥಿತಿಯು ಬದಲಾಯಿಸಿತೆಂಬುದೇ ಭಾವವು.) 14. ಕಟ್ಟಿ ಹಾಕಿದ; ಚಲನೆಯನ್ನು ಪಡೆಯದಿದ್ದ. 15. ಚಲನೆಯೇ ಬಲವು. ಈ ಬಲವನ್ನು ಗಂಡಾಂತರಗಳಲ್ಲಿ ಬಿದ್ದು ಆ ಬಳಿಕ ಪಾರಾಗುವುದಕ್ಕಷ್ಟೇ ಉಪ ಯೋಗಿಸತಕ್ಕದ್ದಲ್ಲ. ವಿಶೇಷವಾಗಿ ಗಂಡಾಂತರಗಳಲ್ಲಿ ಬೀಳದಿರುವುದಕ್ಕೇ ಉಪಯೋಗಿಸಬೇಕು.

ಮಳೆ ನೆಲವನು ತೊಲಗು ಕಲ್ಲಿನೊಳು ಕಿನಿಸವಿರು ।
ಕೆಲವ ಕೆಯ್ಗಣ್ಮದಿರು ಗಾಢವನು ಸೇರದಿರು ।
ಜಲೆಯುಬಂದತ ಕೂಡು ನಿಜಭಾವವುಂ ನೀಡು ಕಾಪಾಡು
ಘನವಂತರಂ ॥ ೧೩ ॥

ತುಪ್ಪದಾ ಸವಿಗಂಡು ನೊಣಹಾಲ ಕೆಡಿಸುವುದೆ ।
ತೆಪ್ಪದಾ ಸುಖವರಿಯಲೀಸುವುದನುಳಿವ್ರುದೆ ।
ಕೊಪ್ಪರಿಗೆ ಹೊನ್ನಿನಿಂ ಕಾಸನೇಳಿಪುದುಂಟೆ ಮೀಸಲಕೆ
ಕಸಬೇಡವೆ[16] ॥

ಬೊಪ್ಪನಾ ಕಣ್ಣುಗಳು ಭೋವಿಯಾ ಪಾದಗಳಿ – ।
ಗರ್ಪಿಸಿದ ಪುಷ್ಪಂಗಳಾಗವೇ ಅಪ್ಪತಿ – ।
ವ್ಮಪ್ಪನರೆಯಾಗೆ ಕರಿಯೊರಲ ಗುಂಡಾತನಿಗೆ ಚಟ್ಟಣಿ –
ಯುರಿಯು ಬೇಡವೇ । ೧೪ ।

ರವಿಯು ಬೆಳಗಿದನೆಂದು ದೀಪವುಂ ದೂಷಿಪುದೆ ।
ಕವಿಯು ಪಾಡಿದನೆಂದು ಕೋಗಿಲೆಯು ನೂಕುವುದೆ ।
ಯುವತಿ ದೊರಕಿದಳೆಂದು ಯೌವನವ ದೂಡುವುದೆ
ಮುದುಕ ತಾಂ ಮೊಮ್ಮಗನನು ॥

ತೆವರುವುವೆ ಜೋಳ ಝಲ್ಲಿರಿಸೆ ದಂಟಕ್ಕುವುದೆ ।
ಕುವರ ಪುಟ್ಟಿದನೆಂದು ಮಡದಿಯುಂ ಕೊಲ್ಲುವುವೆ ।
ಭವದ ತತ್ವವನೊಮ್ಮೆ ಕಂಡುದಕೆ ಬುವಿಗೊಡುವ
ಜಾಣನೊಲ್ಲೆಂಬುದೊಳಿತೇ । ೧೫ ॥

ಮಲ್ಲಿಗೆಯ ವಲ್ಲಿಯುಂ ಚಲ್ಲೆಗಾರ್ತಿಯು ಗಲ್ಲ – ।
ದಲ್ಲಿರಿಸಿ ಜಿಲ್ಲದಾ ಮಡಿಗಟ್ಟಿ ಹಾಲುಣಿಸಿ ।
ಫುಲ್ಲಲೋಚನದೊಳ್ಳೆ ಬೆಳಕು ನ್ಯೆಗಾವು ಸೊಲ್ಲೆಲರುಗಳ
ಸಲ್ಲಿಸಿದೊಡೇಂ ॥

---

16. ಒಂದು ವಸ್ತುವು ಪವಿತ್ರವೆಂದು ಹೇಳುವುದಾದರೆ ಅಪವಿತ್ರ ವಸ್ತುವು ಹತ್ತಿರಿರಬೇಕು.

ಮಲ್ಲಿಗೆಯು ಬಲ್ಲಿತ್ತು ತನ್ನ ಬಲ್ಗಂದಮಂ ।
ಚೆಲ್ಲುವುದು ಬೇಕಾಗೆ ಕಲ್ಲುಹುಡಿಯಾದ ನೆಲ- ।
ದಲ್ಲಿ ಹೂಳಲ್ಲಿ ಹಿತ್ತಲದ ಹೊಲಸಿಕ್ಕು ಮೇಲೆ ನೀರ –
ನೆರೆ ಮಾನವಾ ॥ ೧೬ ॥

ಸೃಷ್ಟಿ ತನ್ನಯ ನೂತ್ನಸೌಭಾಗ್ಯದೊಳಗೆ ತ- ।
ನ್ನಿಷ್ಟ ಸಂದೇಶವನು ಸಾರ್ವ ವುತ್ಕೃಷ್ಟತರ ।
ದೃಷ್ಟರೂಪವ ತೋರಿ ಬಾಲಾರ್ಯಚಿತ್ತದೊಳು
ವೊಟ್ಟಾಗೆ ವಿಸ್ತರಿಸಿದಳ್ ॥

ಶ್ರೇಷ್ಠತತ್ವವು ಮತ್ತಮಲ್ಲಿಂದೆ ಪೂರ್ಣ್ಮೆ ಸಂ – ।
ತುಷ್ಟಿಯಂ ತನುತಲಾ ಮುದ್ದು ಮಾನ ನಿರ್ದುಷ್ಟ ।
ನಿಷ್ಠೆಯಿಂ ಭಜಿಸಿ ಪಾಡಿತು ಬೇಳ್ವುದುಪಕಾರಿ ಪಂಚ –[17]
ಭೂತಾದಿಗಳಿಗೆ ॥ ೧೭ ॥

ಆದೊಡೇಂ ಕಾಲಗತಿಯಲಿ ಯಡಗಿತೀ ಸೊಲಪು ।
ಆದುದೀ ಶೋಭೆಯೆದಕತಿ ಪರಿಚಯಂ ಬಂದು ।
ಮೇದಿನಿಗೆ ಕತ್ತುರಿಯು ಹೆಚ್ಚಾಗೆ ಮಿತ್ತಿಕೆಯ ಮಾಡುವುದು
ಸಾಸಾಜವು ॥

ಆದಿಯಿಂ ಪ್ರಳಯಮೀ ಪ್ರಳಯದಿಂದಾದಿ ಯೆಂ – ।
ಬೊಂದು ನುಡಿ, ತಲೆಯ ತೂನೆಯುವ ತೊಡಕು, ಸಾಕಿದೋ ।
ಆದಿಯುಂ ಪ್ರಳಯುಮುಂ ಸಮುಕಾಲಮಾಗಿಂದು ಹಿಂದ –
ದೊಳು ಕಾಣ್ಬಂದಿವೆ ॥ ೧೮ ॥

---

17. ಪ್ರಾಚೀನ ಕಾಲದಲ್ಲಿ ಆರ್ಯರು ಸೃಷ್ಟಿಯನ್ನು ನೋಡಿ, ಅದರ ಭವ್ಯ ರೂಪಕ್ಕೆ ಮೆಚ್ಚಿ, ಅದನ್ನು ಭಜಿಸಿ ಅದಕ್ಕೆ ಯಜ್ಞಾದಿಗಳಿಂದ ಸಂತುಷ್ಟಗೊಳಿಸಿ ತಮ್ಮ ಉಪಕಾರಬುದ್ಧಿಯನ್ನು ಪ್ರಕಟಿಸಿದರು.

ಸಾರೆಸಂಗ್ರಹಣವಿಲ್ಲೀಗ ಸರ್ವಾಂಗದೊಳ್ ।
ಪಾರುಗಾಣಲ್ಬೇಕು ನಿಜಸುಖಾಶೆಯು ತಗ್ಗಿ ।
ಮಾರಾಗಿ ಮೈಸೊಗವು ಸೊಕ್ಕಬೇಕಲ್ಲದೇ ಪೆರತಿಲ್ಲ
ನಿವೃತ್ತಿಯು ॥

[18] ಬೇರೆ ಬೇರಾದ ಶಾಸ್ತ್ರಂಗಳಿನಿಯಾಗಿ ನೆರೆ ।
ಸೇರಿ ಜೀವವ ಪುಟ್ಟಿಸೀಶ್ವರನ ಸೀಳ್ವನ್ನ – ।
ಮೀರಾಟ ನಿಲ್ಲದೀ ಹೋರಾಟನೊಲ್ಲದೊಡೆ ಮೋಕ್ಷವದು
ಮಾರ್ಗಿಲ್ಲವೈ ॥ ೧೮ ॥

ಈ ಮಹಾ ಪ್ರಳಯದೊಳು ಹಿಂದು ಹಿಂದುಳಿವನೇ ।
ಸೋಮಶೇಖರ ಕಾಯೊ ಹಿರಿಯ ಮನೆತನ ವುಳಿಸೊ ।
ಕೇಮದಿಂ ಬಳಿವಂತೆ ಸಾಮರ್ಥ್ಯಮಂ ದಯಿಸಿ ಬೂಟಾಟಮಂ
ನಿಲ್ಲಿಸೊ ॥

ಪ್ರೇಮಮಂ ಬಲ್ಲವಂ ತ್ಯಾಗಮಂ ಕೊಂಡವಂ ।
ನೇಮಮಂ ಪೊತ್ತವಂ ಧೀಮಂತ ವಿಕ್ರಮಂ ।
ಸೋಮಸೂರ್ಯರೆ ನೋಡಿ ಹಿಂದುವಂ ಸೃಷ್ಟಿ[19]ಯೋದಿಸು
ವಂದವಾ ॥ ೨೦ ॥

ಎಲವೊ ದಮ್ಮಯ್ಯ ನೀಂ ಹಳೆ ಮೋಟ ಮರವಲ್ಲ ।
ಭಲಭಲರೆ ನೀನಿದೋ ಸೊಲ್ಲೊಡೆದ ಹಸುಗೂಸು ।
ಬಳಲದಿರು ಬಳಸಿದೀಯೆನ್ನ ಸೌಂದರ್ಯಮಂ ಕಂಡು
ಸೊಗಗಾಣದುದಕೆ ॥

---

18. ಶಾಸ್ತ್ರಗಳ ಬಲದಿಂದಲೇ (ಬೌದ್ಧಿಕ ಬಲದಿಂದಲೇ) ಜನನ ಮರಣಗಳನ್ನೂ ಸ್ವಾಧೀನಪಡಿಸಿಕೊಳ್ಳುವ ವರೆಗೆ ಬೌದ್ಧಿಕ ಮಹತ್ವಾಕಾಂಕ್ಷೆಯು ನಿಲ್ಲದು. 19. ನೂತನ ಜ್ಞಾನಾದಿಗಳಲ್ಲಿ ಇನ್ನೂ ಕೂಸಾಗಿರುವ ಹಿಂದುವಿಗೆ ಸೃಷ್ಟಿದೇವತೆಯು ಪಾಠ ಕಲಿಸುವಳೆಂದು ಹೇಳುವುದು ಪ್ರಕ್ಷಿಪ್ತವಾದ ನೂತನ ಕಲ್ಪನೆಯು. ಇದು ಕವಿತೆಯ ವಿಷಯದಲ್ಲಿ ನಾವೀನ್ಯವನ್ನು ತಂದು ಕೊಟ್ಟಿತು. ಹಿತದ ಮಾತುಗಳನ್ನು ಹೇಳಲಿಕ್ಕೆ ಅನುಕೂಲಮಾಡಿಕೊಟ್ಟಿತು.

ಬಲಿದ ಪರಿಯೊಳಿದೆನ್ನ ನಾಗಪ್ಪ ಕಾರಿರುಳ ।
ಕಳಿದೆನ್ನ ಮುದ್ದು ಚಂದಣ್ಣ ಸುಡು[20]ರಕ್ಕಸರ ।
ಗೆಲದ ನನ ಸೂರಯ್ಯ ನಾಂ ಪೇಳ್ವೆನೀಗ ನಿನಗುಚಿತವಿದು
ಯಜ್ಞಕುಂಡ ॥ ೨೧ ॥

ಸತ್ವವೇ ಕಲ್ಲದಕೆ ಪ್ರೇಮವೇ ಗಚ್ಚು ಬಾಂ- ।
ಧುತ್ವವೇ ಮೆತ್ತು ಬಲಧೈರ್ಯಸಾಹಸ ನಿಶ್ಚಿ- ।
ತತ್ವಾದಿಯೇ ಸಾರಣೆಯು ಮತ್ತೆ ಕಾರುಣ್ಯವೇ ಕಾರಣೆಯು
ತಿಳಿದೆಯಾ ॥

ತತ್ವತತ್ವವ ತಿಕ್ಕು ಸತ್ಯದಾ ಗಾಳಿಗೊಡು ।
ಚಿದ್ವಹ್ನಿಯಂ ಚುರ್ಚು ಯಾತ್ಮ ಸಮಿಧೆಯನುಣಿಸು ।
ಋತ್ವಿಜನೆ ಪೆಸ[21]ಜಾಣ ಮಂತ್ರವಧುನಿಕ ಶೋಧವಾಜ್ಯ
ವೆಮ್ಮಾರ್ಯತನವು ॥ ೨೨ ॥

ಸೋ[22]ವುತವನುಣ್ಣುವರ ಪೆಸರ ಕೇಳಿನ್ನುಗ ।
ಜೀವನೋಪಾಯುದುದ್ಯೋಗವಾ ವ್ಯಾಪಾರ ।
ಭಾ[23]ವದೈಕ್ಯವ ಶೋಪ ವೊರ್ನುಡಿಯು ಪರಧರ್ಮ ಸ್ಮರಣೆಯು
ವ್ಯೈಜೋಕೆಯಾ ॥

ಕಾವಕೈದುಗಳಾತ್ಮಿಕಾಭ್ಯಾಸ ನಾಡೊಳಿತ ।
ನೀವ ಬಲ್ಲೋದು ಸಾಹಿತ್ಯಶಾಸ್ತ್ರಾದಿಗಳು ।
ನಾವು ನಮ್ಮಿಚ್ಛೆಯಿಂದಿರ್ದು ಹಂಗುಳಿದು ಬಾಳ್ವಲ್ಲ
ನೆರವಣಿಗೆ ಸೈಸೈ ॥ ೨೩ ॥

---

20. ದುಷ್ಟ ರಾಕ್ಷಸ. ಹಳೆಯುದನ್ನೂ, ಮುತ್ತಿಕೊಂಡುದನ್ನೂ, ನಾಶಪಡಿಸುತ್ತಿರುವುದನ್ನೂ ಹೋಗಲಾಡಿಸಿದುದರಿಂದ ನಾಗಪ್ಪ, ಚಂದಣ್ಣ, ಸೂರ್ಯ ಎಂಬಿವುಗಳ ಸಾಧರ್ಮ್ಯವನ್ನು ಇಲ್ಲಿ ಹೇಳಿದೆ. 21. ಹೊಸ ವಿದ್ಯೆ. 22. ಆಹುತಿ. 23. ಸದ್ಭಾವವನ್ನು ಒಟ್ಟುಗೂಡಿಸುವಂಥ ಸತ್ಯ ವಚನವು.

ಕಡೆಯೊ ಕಡೆಯೊಡಬೇಡಯ್ಯ ಮಗುಳೀಂ ಭರದೊ- ।
ಳಿಡೆತಪ್ಪಿ ಬೆಳ್ಳೇಡ ಮನೆಗೆಡ್ಡು ಹೊಲಗೆಲ್ಲೊ ।
ಅಡವಿಯುಲಿ ನೋಡು ಸಾರಂಗ ಸ್ವೈರಿಸನಸ್ಯನಂ ಮುನ್ನ
ಮನೆಯೊಳಿಂತುಂ ॥

ಪಡೆದು ದಿವ್ಯಾಕ್ಷಿಯುಂ ಜಗವ ನೋಡಿತ್ತ ಕಡೆ ।
ಪಡಿತಳವ[24] ಪಡೆವನ್ನನಾತಳದ ನೀರ್ಬಿಡದು ।
ಪೊಡವಾಗಿ ಕಾಸದೊಡೆ ಕಬ್ಬಿಣವದಪ್ಪುದೈ ದೊಡ್ಡಿತೆಗೆ
ಹಾಯಬೇಡಾ । ೨೪ ॥

ಈ ಕಾರ್ಯರ್ಗವೀಗ ಕೈನೀಡಿ ಕರೆವುತಿರೆ ನೀ- ।
ನೀ ಕಾಲದೊಳು ಪಸುಳೆ ಕೋಟಲೆಗೆ ಕೂಡದಲೆ ।
ಲೋಕಾಗ್ರಚಿತ್ತದಿಂದೀ ಯಜ್ಞಕುಂಡದೊಳ್ಸರ್ವ
ಸ್ವವನ್ನರ್ಪಿಸೈ ॥

ಶ್ರೀಕಾಂತ ನಾರಾಯಣಾಂಕಿತ ಮಹಾಕಾಲ- ।
ನೇಕೇಳ್ವೆ ಬಳೆಸಿ ನಿನ್ನನು ದಿವ್ಯಸೌಖ್ಯದೊಳು ।
ನಾಕೇಶನೊಡೆಯನೀನೆಂಬಂತೆ ಮಾಳ್ಪನಿನ್ನೀ ಸ್ವರ್ಗ[25]
ರಾಜ್ಯಪದದೊಳ್ ॥ ೨೫ ॥

---

24. ಮೇಲ್ಬದಿಗೆ ಇದ್ದ ನೀರಿನ ಸಂಗ್ರಹಕ್ಕೂ ಕೆಳಬದಿಗೆ ಇದ್ದ ನೀರಿನ ಸಂಗ್ರಹಕ್ಕೂ ಸಂಬಂಧವುಂಟಾಗಲು ಸಮಪಾತಳಿಯನ್ನು ಹೊಂದುವ ವರೆಗೆ ಮೇಲ್ಬದಿಯ ನೀರು ಕೆಳಬದಿಗೆ ಹರಿಯಲೇ ಬೇಕು.
25. ಸ್ವರಾಜ್ಯ.

೧೧.

ಯೌವನೋದಯ.

[ಈ ಕವಿತೆಯು ‘‘ ಸತೀಸ್ಮಾರಕ ’’ ವೆಂದು ಬರೆಯಬೇಕೆಂದಿದ್ದ ಪುಸ್ತಕದ ಒಂದು ಭಾಗವು. ಹಲಕೆಲವು ತೊಂದರೆಗಳ ಮೂಲಕ ಗ್ರಂಥ ವನ್ನು ಪೂರ್ಣ ಬರೆಯುವುದಾಗಲಿಲ್ಲ. ಇಲ್ಲಿ ಇದನ್ನು ಆ ಪುಸ್ತಕದಲ್ಲಿ ಬರ ಬಹುದಾದ ಕವಿತೆಯ ಮಾದರಿಯೆಂದು ಕೊಟ್ಟಿದ್ದೇನೆ. ಪ್ರತಿಯೊಬ್ಬನಿಗೂ ಯೌವನೋದಯದಲ್ಲಿ ಪ್ರಾದುರ್ಭವಿಸುವ ವಿಚಾರಗಳನ್ನು ಈ ಕವಿತೆಯಲ್ಲಿ ವರ್ಣಿಸಿರುವೆನು. ಯೌವನದ ಮಹಿಮೆಯು ತಿಳಿಯಲಶಕ್ಯವು; ಯೌವನ ದಲ್ಲಿ ಯೋಗ್ಯ ಧ್ಯೇಯವನ್ನಿಟ್ಟುಕೊಂಡು ಬಾಳಿದವನಿಗೆ ಪ್ರೇಯಸ್ಸು ಶ್ರೇಯ ಸ್ಸುಗಳೆರಡೂ ದೊರೆಯುವುವು. ಈ ಕವಿತೆಯ ವೃತ್ತವು ಚಂಪಕಮಾಲೆಯು. ಇದರ ಭಾಷೆಯು ಗಡಚಾಗಿರುವುದೇನೋ ನಿಜ.]

[1]ಪಸುಳನ ಪೂರ್ವರೂಪನಿವನೆಂದುರೆ ಮೆಚ್ಚಿ ಪರಾಂಗನಾಜನಂ ।
ಬಸಿರೊಳೊಡರ್ಚಿ ತಿರ್ದಿ ಮುದಮೇರೆ ಪಳಂಚಿ ತೊಡಳ್ಪು ಮುದ್ದಿದಂ ॥
ಸಿಸುವಿನಲಂಪು ಕಲ್ತೊರೆವ ಪೆಂಪನಳುರ್ವ ಕುಮಾರಕಂಗೆ ನೀ-।
ಳ್ದೊಸಗೆ ನಿಮಿರ್ಚಿ ಬಂದುದಲೆ ಚೆಂದದ ಸಂದ ಸುಯೌವನೋದಯಂ ॥ ೧ ॥

[2]ನೆಂದುದಂಗಯಷ್ಟಿ ಕಡು[3]ಸೇದುರ್ವು ತೋಳ್ತೊಡೆಯುಂ ಬೆರಳ್ಗಳುಂ ।
ತೋರುವರೋರೆ ನೋಟದೊಳೆ ಜೀಟವ ನಿ[4]ಪ್ಪೊಸತಾದ ವೆಂಡಿರುಂ ।

---

1. ಎಲ್ಲರೂ ಎತ್ತಿಕೊಂಡು ಮುದ್ದಿಡುವ ಶೈಶವವು ಮೀರಿ, ಓದಿ ಕಲಿಯುವ ಬಾಲ್ಯವು ಮುಗಿದು ಚೆಂದವಾದ ಯೌವನವು ಪ್ರಾಪ್ತವಾಗು ವುದು. 2. ಪೂರ್ಣತೆಪಡೆಯಿತು. 3. ಬಿರಸಾದವು. 4. ನೂತನ ಯುವತಿಯರು.

ಪೀಡಿಪುದೆಂದಮುಂ ಮದನಚೇಷ್ಟೆ ಮನಕ್ಕಸುಗೊಳ್ಳದಾಯ್ತು ಮೇಣ್ ।
ಪೀಡದೆ ಪಿಂಗದೇರ್ದುದದು ಚೆಂದದ ಸಂದ ಸುಯೌವನೋ-ದಯಂ ॥೨॥

ಮದನಗಿದಸ್ತ್ರನಿಷ್ಕ್ರಪಣಶಾಲೆಯೊ ಮನ್ಮಥರಾಜ್ಞನಿವಾಸವೋ ।
ಸದನಮೊ ಕಾಮಮಂತ್ರಣಕೆ ಮೇಣ್ ರತಿಯಾಟದ ಪಟ್ಟಹಾಸವೋ ॥
ಕ[5]ದನ ನಿದಾನವೋ ಮದನಗೀಶಗೆ ಪತ್ತೆ ರತಿಪ್ರಸಾದವೋ ।
ಪದೆದುಸಿರಲ್ಕೆ ಬಾರದೆನೆ ಪೆರ್ಚಿತು ಸಂದ ಸುಯೌವನೋದಯಂ ॥ ೩ ॥

ಜಗವಿದು ಸುಳ್ಳು ಬಾಳ್ವೆ ಬರಿದೀ ತಿರೆ[6]ಯೊಲ್ಮೆಯೊಳಿಲ್ಲವೈ ಪುರುಳ್ ।
ತೆಗಳರಿವರ್ಗಮಂ ಪೊಗಳೊ ಸೀಂ ಯತಿಯುಂ ಕೊಳಿಲ್ಕೆ ವಿರಾಗಮಂ ॥
ಮುಗುಳ್ದಿಳಿಬಾಳಸೊಲ್ಲದೊಡೆ ಜಾಸಿಸೊ ಬೊಮ್ಮನನಾತ್ಮಹೀನನಂ ।
ಅಗ್ಗಣಿತವಾರಸೋಜನೆನೆ ಸತ್ಯಮೆ ಪರ್ಬಿರೆ ಯೌವನೋದಯಂ ॥೪॥
ಜೀನಿಯು ಭೀತಿ ಮಿತ್ತುವಿನ ಮಂಕು ವಿಪತ್ತಿನ ಸತ್ತು ವಿತ್ತದಾ ।
ಜಾನಮುದೋದಿಸಾದರ ವಿವೇಕದ ದೂರು ಸುಧರ್ಮದಾರ್ಜವಂ ॥
ಮಾನದ ಮೂತು ನೀತಿಯ ನಿಯಂತ್ರಣ ಕೇ[7]ಣದ ಕೂನವೆಂಬಿವಿ- ।
ನ್ನೈನವು [8]ದೇಸೆಯೆಂಬ ತೆರ ನಾಳ್ವುದು ಸಂದ ಸುಯೌವನೋದಯಂ ॥ ೫ ॥

ಅ[9]ರತಿಪುಳಂ ಕರಂ ಸಮೆದು ತೆಕ್ಕುವೆನಾಂ ಸಮರಾದಿ ಸೂರಿಯು- ।
ನ್ನೆಂಬೆನನಂತ ಶಕ್ತಿಯುನಮರ್ಜಿ ಸಮುದ್ಧತ ಮಾರುತೇ[10]ಯರಂ ॥

---

5. ಈಶ್ವರನೂ ಕಾಮನೂ ಕಾದಾಡುವ ಕಾರಣವು. 6. ಭೂಮಿಯಲ್ಲಿ ಮೆಚ್ಚಿಕೆ. 7. ಕೋಪದ ಚಿಹ್ನ. 8. ಶೋಭಿಪೊಂದವು. 9. ಧರ್ಮದ ತತ್ವ. 10. ಹನುಮ ಭೀಮರನ್ನು.

ದೊರೆಕೊಳುತಂ ಮಹತ್ತ್ವಮು ಸುನೀತಿಯ ನೋತ್ತ್ವನೆನೀಗ
ಶೌರಿಯುಂ ।
ಮೆರೆವೆನಸಾವ್ಯನೆಂದೊರೆವನೋರ್ವ ಯುವಂ ಗಡ ಯೌವನಾದಿ
ಯೊಳ್ ॥ ೬ ॥
ವಂಶದ ಕೀರ್ತಿ ದೇಶದಭಿವೃದ್ಧಿ ಪರತ್ರದ ಸಿದ್ಧಿ ಬಲ್ಲರಾ- ।
ವೇಶದ ಬೋಧ ಮಿಂಗಿತದ ಪಾಂಗು ವಯುಸ್ಕರ[11] ಯೋಗವೆಂಬಿವು-।
ದ್ದೇಶಗಳಿಲ್ಲ ಸೇದುರ್ಪತದೋರುವ ಮುನ್ನಮನಂಗ ದೇವ ಸಂ- ।
ದೇಶ ಪತಾಕೆ ಮೇಲ್ಪುಟಿಯು[12] ತೆಂಬದೊಳೊಪ್ಪಿತು ಯೌವ
ನಾದಿಯೊಳ್ । ೭ ॥
ಇದು ಕಿರಿ ವಿದ್ದೆ ಯೈಸಿರಿಯಿದೇಂ ಘನ ವೆಂತುಟೊ ಮೆಯ್ಮೆ
ವೇಬುದೊಂ- ।
ದದೆಯನೆ ಪಾರೆಸೆಂದು[13] ಕಡು ನೊಂದು ಸಮುಂತು ಕುನೇಗಿ
ಯುಬ್ಬೆಗ- ।
ಕ್ಕೆದಿರ್ದ*ಳಿಯಲೊಳಿಂಗಗಳನೊಡ[14]ರ್ಚುವ ಕಾಲದಿ ಬೀಗಿಯುಬ್ಬುವಾ।
ವುದ ಮದ ಚೋದ್ಯಮಾ ಮದುವೆಯೆಂಬುಡಮದುರ್ದು
ಯೌವನಾದಿಯೊಳ್ ॥ ೮ ॥
ಉಡಲುಡೆಯಿಲ್ಲ ತಿನ್ನಲೆಡೆಯಿಲ್ಲ ನಿಲಲ್ಕಡಿಯಿಲ್ಲ ನಾಡೊಳೀ ।
ನಡುವಿನೊಳಿಲ್ಲ ವೊಕ್ಕವಡೆಯಿಲ್ಲೊಡನಾಡಿಗಳಿಲ್ಲ[15] ಬೇಡಲುಂ ॥
ಕೊಡರಹ ಸಾಲಮುಂ ಪೊಣೆಯುಮುಂ ಬಡವಂಗೆನೆ ಬಂದ
ಕೇಡೊಳುಂ ।
ತೊಡೆದಪುದೆಡ್ಡಮುಂ[16] ಮೊಗಕೆ ನಿಬ್ಬಣಮೆಂಬುದು ಯೌವ
ನಾದಿಯೊಳ್ ॥ ೯

---

11. ಸಮ ವಯಸ್ಸಿನವರ ಸಂಗ. 12. ಮೋರೆಯ ಮೇ[…]
ಮೀಸೆಯೊಡೆಯಿತು. 13. ಅಪೇಕ್ಷೆಯನ್ನು ಅಥವಾ ಪುರುಷಾರ್ಥವನ[…]
ತಿಳಿದುಕೊಳ್ಳಲಾರೆನು. 14. ಹೀನಪ್ರಕಾರದ ಕೆಲಸ. 15. ಮಿತ್ರರು[…]
16. ಸೊಬಗು ಬರುವುದು.

ಮಲ್ಲಿಗೆ ಪೂವಿಗುಂಟೆಸುಗೆ ಪಲ್ಲವಕುಂಟು ರಸಾಲ ಪಣ್ಣಿಗೈ ।
ಸೊಲ್ಲಿಗೆ ಕೀರಮಿಂಚರಕೆ ಕೋಗಿಲೆ ಬಣ್ಣಕೆ ಹಂಸಮಲ್ಲವೇ ॥
[17]ಭಲ್ಲುಕ, ಕೇಶಕೈಸೆ ಪುನುಂಗಿಗೆ ಮಾರ್ಜರ, [18]ಗಂಧಕಾಮಿಗಂ ।
ಬಲ್ಲವರಿಂತು ಬಯಸ್ಸುಳಿದುದಂ[19] ಮದುಗೆಯ್ವರು[20] ಯೌವ
ನಾದಿಯೊಳ್ ॥ ೧೦ ॥

[21]ಕಾರ್ಯದ ಪಾರಮಾಚರಣ ದರ್ಪಣ ಮುನ್ನತ ಧರ್ಮ ದೀಪಕಂ ।
ಧೈರ್ಯದಯಾದಿ ಸದ್ಗುಣ ವಿವರ್ಧಕ ಮಿಂಗಿತ ಚಾರು ಚೇತಕಂ॥
ವೀರ್ಯವಚೋಭಿಮಾನರುಚಿ ಪೋಷಕ ವೈಹಿಕ ವಸ್ತು ಸಾರಮಾ ।
ಭಾರ್ಯೆಯ ಸಂಗಮೆಂದೆ ನವಳಂ ನಡೆ ನೋಡುತೆ ಯೌವ
ನಾದಿಯೊಳ್ ॥ ೧೧ ॥

---

17. ಕರಡಿ. 18. ಕಸ್ತೂರಿಮೃಗ. 19. ಉಳಿದುದೆಲ್ಲವನ್ನು ಬಿಟ್ಟುಕೊಟ್ಟು. 20. ಕೆಲವು ಕಾರಣಗಳ ಸಲುವಾಗಿಯೇ ಜೀವಾಜೀವ ಕೋಟಿಯೊಳಗಿನ ವಸ್ತುಗಳು ಖ್ಯಾತವಾಗಿರುವುವು; ಮತ್ತು ಮಾನವರಿಗೆ ಉಪಯುಕ್ತವಾಗಿರುವುವು. ಹಾಗೆಯೇ ಕಾಲಮಾನದಲ್ಲಿಯಾದರೂ ವಯೋವಸ್ಥೆಗಳು ಕೆಲವು ಉದ್ದೇಶಗಳಿಗಾಗಿಯೇ ಕ್ಲೃಪ್ತವಾಗಿರುವುವು. ಯೌವನಾವಸ್ಥೆಯು ಮದುವೆಗಾಗಿಯೇ ಎಂದು ನಿರ್ಧಾರವಾಗಿರುವುದು. 21. ಈ ಬಗೆಯಲ್ಲಿಯೇ ಭಾರ್ಯೆಯ ಸಂಗವು ಪರಿಣಮಿಸುವ ಹಾಗೆ ಯೌವನ ಕಾಲದಲ್ಲಿ ಬಾಳಬೇಕಲ್ಲವೇ ?

೧೨.

ಜಗನ್ನಾಥವಿರಚಿತ

ಗಂಗಾಲಹರಿ.

(ಕನ್ನಡ ಅನುವಾದ.)

[ಶಿಖರಿಣೀ ವೃತ್ತದ ಮೇಲೆ ನನ್ನ ಮಮತೆ ಬಹಳ. ಗಂಗಾಲಹರಿಯನ್ನು ಭಾಷಾಂತರಿಸಲಿಕ್ಕೆ ಅದೇ ಮುಖ್ಯ ಕಾರಣವಾಯಿತೆಂದರೂ ತಪ್ಪಾಗದು. ಅನೇಕರು ಗಂಗಾಲಹರಿಯ ನಿತ್ಯಪಠಣವನ್ನು ಮಾಡುವರು. ಅಂಥವರಿಗೆ ಈ ಕನ್ನಡ ಅನುವಾದವು ಉಪಯೋಗವಾಗಬಹುದು. ಸಮಶ್ಲೋಕದಲ್ಲಿಯೇ ಭಾಷಾನತರವಿರುವುದರಿಂದ ಕನ್ನಡ ಗಂಗಾಲಹರಿಯನ್ನಾದರೂ ಅವರು ಪಠಿಸಬಹುದು. ವೃತ್ತವು ಮೂಲತಃ ಕಠಿಣವಿರುವುದರಿಂದ ಈ ಅನುವಾದವು ತುಸ ಮಟ್ಟಿಗೆ ಕಠಿಣವೇ ಆಗಿರುವುದು; ಉಪಾಯವಿಲ್ಲ. ಕೆಲವೆಡೆಯಲ್ಲಿ ಮೂಲವು ಕಠಿಣವಾಗಿದ್ದು ಕನ್ನಡ ಅನುವಾದವು ಸುಲಭವಾಗಿರುತ್ತದೆ. ಸಾಧಾರಣವಾಗಿ ಎಲ್ಲ ಶ್ಲೋಕಗಳನ್ನೂ ನಾನು ಶಬ್ದಶಃ ಭಾಷಾಂತರಿಸಿರುವೆನು; ಅರ್ಥದಲ್ಲಿ ವ್ಯತ್ಯಾಸವಾದರೂ ಬಾರದಂತೆ ಎಚ್ಚರಪಟ್ಟಿರುವೆನು. ಕುಂದುಕೊರತೆಗಳನ್ನನುಲಕ್ಷಿಸದೆ ಈ ಕೃತಿಯನ್ನು ಕನ್ನಡಿಗರು ಸ್ವೀಕರಿಸುವರೆಂದು ನಾನು ನಂಬಿರುವೆನು.]

ಇದೇ ಭೂಸೌಭಾಗ್ಯಂ ಜಗದುದಯಲೀಲಾಕರ ಶಿವಂ- ।
ಗುದಗ್ರೈಶ್ವರ್ಯಂ ಮೇಣ್ಸಕಲಮಿದು ಶಾಸ್ತ್ರಾಗಮಗಳ ॥
ಇದೇ ರೂಪಂಪೆತ್ತಿರ್ದ[1]ಮಿಷರ ಸೈಪೆಂದು ಪೊಗಳ್ವಾ ।
ಸುಧಾಸಾರಂ ನಿನ್ನಾ ಜಲ[2]ಮಳಿಪುಗೇಮ್ಮಶುಭಮಂ ॥ ೧ ॥
ದರಿದ್ರಾಗಾರಂ ದುರಿತವಹ ದು[3]ರ್ವಾಸನೆಗಳಂ ।
ಕರಂ ನೋಡಲೊಲ್ಕೊಂಡೇ ಸಲಸೆ ಹೇಪಂತಿರ್ಪ ಬಗೆಯೊಳ್ ॥

1. ಪುಣ್ಯ. 2. ನಾಶ ಮಾಡಲಿ. 3. ಆಶೆಗಳನ್ನು.

ವರೇಣ್ಯಂ ಮಾಯಾಭೂರು[4]ಹವನುರೆ ನುಣ್ಮಾಳ್ಪ ಕೃತಿಯೊಳ್ ।
ಶರಣ್ಯಂ ನಿನ್ನಂಭಂ ಕುಡುಗೆಮಗೆ ಗೆಲ್ಪಂ ಜಗದೊಳು ॥ ೨ ॥
ಬಿಸಿಲ್ಮೇಲೇರ್ವಂತೇ ಸ್ಫಟಿಕಪಟಮಂ ತೋರ್ವಗಜೆಯಾ ।
ಶಃಶಾ[5]ಗ್ರೇಕ್ಷ್ಣಾಪಾತಂ ಗತಿಗೆಡಿಸಿ ಮಾರಾರಿಶಿರದೊಳ್ ॥
ಭೃಶಂ ಗಂಗೇ ನಿನ್ನಂ ಕುದಿಸುತಿರೆ ನಿನ್ನೊ[6]ಳ್ಭದ್ರೆರೆಗಳೇ ।
ಅಶೇಷಂ ಮಾಳ್ಕೆಮ್ಮೊಳ್ ದುರಿತಭಯಮಂ ವ್ಯಾಕುಲಿತರೊಳ್ ॥ ೩ ॥
ಎಲೈ ತಾಯೇ ನಿನ್ನಾಸ[7]ರದೆ ಹೊರಚಲ್ವುರ್ಬಿನಲಿ ನಾಂ ।
ನಿಲಿಂಪರ್ಗುನ್ಮತ್ತಂ ಸಲೆಯುಹೆನು ಭಾಗೀರಥಿಯೆ ಹಯ್ ॥
ವಿಲುಪ್ತಂ ನಾನಪ್ಪಂ ನಿರಿಕಿಪೊಡೆಯೌದಾಸ್ಯದಲಿ ನೀಂ ।
ವಿಲಾಪಪ್ರಸ್ತಾಪಂ ಸರಿಯುಹುದಾಗಾರಿದಿರೊಳು ॥ ೪ ॥
ಸುಕೃತ್ಯಾ ಗೆಯ್ಯಲ್ಕಾಗದನರನು ನಿನ್ನಂ ನೆನೆಯಲಾ ।
ನಿಕೃಷ್ಟಂ ಗೇಹೆಯ್ನಿಂ ಬೆಳಕನಿರುಳಂ ಪೊಯ್ವ ಸಸಿವೊಲ್ ॥
ಪ್ರಕಾಮಂ ಗೀರ್ವಾಣರ್ ಭಜಿಪ ಜಲರೂಪೇ ಕರುಣೆಯಿ- ।
ನ್ನ ಕ[8]ಲ್ಪತ್ರೈತಾಪಂಗಳ ಕಳೆಯೆ ಪಾಪಂಗಳನು ಮೇಣ್ ॥ ೫ ॥
ತೃಣಂ ಸ್ವೈ ಪೇನರ್ಘಡೆಂದೆನುತದನು ಬೀಸಾಡಿ ನರರಾ- ।
ಕ್ಷಣಂ ವಾನೀರಂಗಳ್ ಬೆಳೆದೆಸೆವ ನಿನ್ನಿರ್ಕೆಲಗಳಂ ॥
ಅ[9]ಣಂ ಸಾರುತ್ತಿಂಟಲ್ ಸುಧೆಯ ಪಳಿವಾ ನಿನ್ನ ಜಲಮುಂ ।
ಕಣಾ ಕೀಳ್ಮಾಳ್ಕುಂ ಮೋಕ್ಷವನವರ ಸಾನಂದಪದವು ॥ ೬ ॥
ನರೇಶಸ್ತ್ರೀವೃಂದಂ ನಸುಬೆಳಗಿನೊಳ್ಮಿಂದೊಡವರಾ- ।
ಸುರವ್ಯೋರೋಜಾಗ್ರಂ ತಳೆದಿರುವ ಕಸ್ತೂರಿಕೆಯುಂ ಸ- ॥

---

4. ಮಾಯೆಯೆಂಬ ಗಿಡವನ್ನು ಕಡಿದು ಚೂರು ಮಾಡುವ. 5. ತೀಕ್ಷ್ಣ. 6. ಶುಭಕಾರಿಯಾದ ತೆರೆಗಳು. 7. ಆಶ್ರಯ. 8. ಪ್ರಬಲವಾದ, 9. ಸ್ವಲ್ಪ.

ತ್ವರಂ ನಿನ್ನಂ ಜೂಡಲ್ ಸುರವನದಿ ವೈಮಾನಿಕಚಮೂ ।
ಪರೀತಂಗಳ್‌ಸ್ವೈರಂ ಪುಗುತಿಹುವು ಪೂತಾಂಗ ಮೃಗಗಳ್ ॥ ೭ ॥

ಮನ್ಸ್, ಹಾ ! ತತ್ಕಾಲಂ ಸಮತೆಪಡೆಗುಂ ಜಾನಿಸಿದೊಡಂ ।
ಸುನಾಮೋಚ್ಚಾರಂ ಮೇಣ್ ಧುರಿತಭವ ತಾಪಂಗಳಾಗುಂ ॥
ಎನುತ್ತಂ ಪೇಳ್ಬಲ್ಲ ಶ್ರವಣರುಚಿ ಗಂಗಾಪದಮದೇ ।
[10]ಸನಾತ್ತಿರ್ಕೆನ್ನಾತ್ಮಾನನಗಳಲಿ ನೃತ್ಯಂನೆಗಳುತೆ ॥ ೮ ॥

ಪರಾನಂದಾಲೋಲರ್ ವಿಹರಿಸುತೆ ನಿನ್ನೂರುತಲದೊಳ್ ।
ಸುರೇಶಾವಾಸಂ ಬೇಡೆನಲು ದುರುಳರ್ನಾವೆನಿಸೆವೈ ॥
ಜರಾಜನ್ಮಾಂತಕ್ಲೇಶವನು ನೆರೆ[11]ಯಿಂ ಕೀಳುವ ಮಹ- ।
ತ್ತರಂತೀರಂ ನಮ್ಮ ಶ್ರಮಶಮನಮಂ ಗೆಯ್ಯು ಮೆರೆಗೆ ॥ ೯ ॥

ಅವೇ ವೇದಂಗಳ್ ಬೇರ್ಪಡದೆ ಪೊಗಳಲ್ ಪೊಣ್ಮದ[12] ತಿರುಳ್ ।
ಸುವಾಕ್ಚಿತ್ತಂಗಳ್ಗಂ ತಿಳಿಯಲನುವಿಲ್ಲೆಂಬ ಬಗೆ ತಾಂ ॥
[13]ಅವೇದ್ಯಾಂಗಂ ನಿತ್ಯಂ ನಿಜಮಹಿಮನಿರ್ವಾಸಿತತಮಂ ।
ಪವಿತ್ರಂ ತತ್ವಂ ನೀಂ ಸುರತಟನಿ ಬೇರೊಂದಿರುವುದೇ ॥ ೧೦ ॥

ವಿಶಾಲಧ್ಯಾನಾನೇಕವಿಧಕ್ರ*ತುದಾನಾಧಿಕಗಳಿಂ ।
ಅಸಾಧ್ಯಂ ತಾನೆಂಬಂತಿರುವ ಹರಿಪಾದಾಂಬುಜವ[14] ನಿ- ।
ಲ್ಕಿಸಲ್ಕಾರುಂಟೇಂ ಪಾಸಟಿ ನಿನಗೆ ಸಾಮಾನ್ಯ ಜನಕೆ ॥ ೧೧ ॥

ಶುಭಾಂಗೆ ನಿನ್ನಂ ಕಾಣ್ಬೊಡನೆ ಭವದಳ್ಕಂ ಪರಿವುದೇ ।
ಪ್ರಭಾವಂ ಭೂಲೋಕಸ್ತುತಿಗಸದಳಂ ತೋರ್ಪುದದರಿಂ ॥

---

10. ಯಾವಾಗಲೂ. 11. ಸಮೀಪದಲ್ಲಿದ್ದ ಮಾತ್ರದಲ್ಲಿ 12. ಮರ್ಮ. 13. ತಿಳಿಯಲಿಕ್ಕಾದ ತನ್ನ ಮಹಿಮೆಯಿಂದ ಅಜ್ಞಾನ
ವನ್ನು ದೂರ ಮಾಡಿದ. 14. ನಿಲುಕಿಸಿ ಕೊಡಲಿಕ್ಕೆ.

[15]ಪ್ರಭೂತಾಮರ್ಷಮ್ಲಾನನಗಜೆಯು ಹಾರಯ್ಕೆ ಯೊಗೆದುಂ ।
ವಿಭೂತ ಶ್ರೀಕಂಠಂ ಮುಡಿದಿಹನು ನಿನ್ನಂ ಜಡೆಯೊಳು ॥ ೧೨ ॥
ಮತಿಭ್ರಾಂತರ್ ಹೀಯಾಳಿಸುವ ಪತಿತರ್ ಹಿಂಜರಿಯುವ ।
ಪ್ರತೀಪೂತರ್ ಮಾತಾಡದ ಪಿಸುನಿಗಳ್ ಬೆರ್ಚಿ ಬಿಗು*ವಾರ್– ॥
[16]ಶ್ರಿತಪ್ರಾಣಿಕ್ಷುದ್ರಂಗಳನೆನಸುಮುಜ್ಝತ್ತಮನಿಶಂ ।
ನಿತಾಂತಾಶ್ರಾಂತಾಂಬೇ ವಿಜಯಿಸುವೆ ನೀನೋರ್ವಳೆ ಭಲೆ ॥ ೧೩ ॥
[17]ಇಲಾಲೋಕವ್ಯಾಪ್ತಾರ್ತಿಹರಣಕೆ ಸಾಕಂ ಬಿಡಲುಮು– ।
ನ್ನಲೋಭಂ ಮಾದೇವಂ ಜಡೆನಡುವೆ ನಿನ್ನಂ ಬಿಗಿದನೈ ॥
[18]ಕಲಂಕಂ ನಿನ್ನೊಳ್ತೋರಿದುದು ಗುಣಕೋಶಾಂತರಗತಂ ।
ವಿಲೋಭರ್ ಲೋಭಕ್ಕಾಸ್ಪದ ಗೊಡುವರೇನೆಂಬುದಿದಕೆ ॥ ೧೪ ॥
ಜಡಂ ಮೂಕಂ ಕುಂಟಂ ಜನುಮಗಿಪ್ಪಡಂ ಕಣ್ಣಿರದವಂ ।
[19]ತೊಡರ್ಪೂರ್ರಾಗಲ್ಬಾರದ ದುರಿತದೊಳ್ ಜಾರಿದ ನರಂ ॥
ನ್ಯೈಡಾದಿತ್ಯಕ್ತಂ ಪೋರ್ ನರಕ ನಿಲಯಂ ದುರ್ಗ್ರಹವಶಂ ।
ಬಿಡಂ ನಿನ್ನಂ ಪಾತೇ ದುರಿತಧವನ್ನೈಕೌಷಧೆಯುಳಂ ॥ ೧೫ ॥
ಮೊದಲ್ಗೊಂಡುಣ್ಬರ್ದೀರುಕುಳಿರನೊಡಂಗೊಂಡ[20] ತಿಳಿಯುಂ ।
ಪೊದಳ್ದೀ ಪಾನೀಯಂ ಪಡೆದ ಪೆಸರೇಳ್ಗುಂ[21] ಜಗದೊಳೌ ॥
[22]ಮುದಂ ಪಾಡುತ್ತಿರ್ಪರ್ ಸಗರಜರು ರೋಮಾಂಚಿತರವರ್ ।
ಪಿದಿಪ್ರಾಂಗಸ್ವರ್ಗಂ ಪಡೆವು ಗಡ ನಿನ್ನೀ ಜಲವನೇ । ೧೬ ॥

---

15. ಅತಿಶಯ ಮತ್ಸರದಿಂದ ಬಾಡಿದ ಪಾರ್ವತಿಯು. 16. ಆಶ್ರಿತ ಪ್ರಾಣಿಗಳ ಪಾಪಗಳೆಲ್ಲವನ್ನೂ ತೊಳೆಯುತ್ತ. 17. ಭೂಮಿಯನ್ನು ವ್ಯಾಪಿಸಿದ ದುಃಖವನ್ನು ಕಳೆಯುವುದಕ್ಕೆ. 18. ನಿನ್ನ ಗುಣಸಮೂಹದಲ್ಲಿ ಕಲಂಕವು ತೋರಿತು. 19. ಸಂಪರ್ಕವು ಹೋಗದ. 20. ಹೆಚ್ಚಾದ ತಂಪನ್ನೂ ತಿಳಿಯನ್ನೂ. 21. ವಿಖ್ಯಾತವಾಗುತ್ತಿದೆ. 22. ಆನಂದದಿಂದ.

[23]ಇನಿತ್ತಿಷ್ಟೇ ತಪ್ಪಂ ಭರದಿ ಲಘುಸಂತಾಪಗಳನುಂ ।
ವಿನಾಶಂಮಾಳ್ಪಂತೋ ವಿವಿಧ ಜಲತೀರ್ಥಂಗಳಿಹವೈ ॥
ಅನೇಕ ಪ್ರಾಯಶ್ಚಿತ್ತಬಹಿರ ದುರಾಚಾರರತರಂ ।
ವಿನಾ ನಿನ್ನಂ ಗಂಗೇ ಪರಿಹರಿಪರುಂಟೇ ತ್ರಿಜಗದೊಳ್ ॥ ೧೭ ॥
ಸುಧರ್ಮಕ್ಕಾಗಾರಂ ನವಮುದಕೆ ಬೇರೊಂದು ತೆರವೈ ।
ಪ್ರಧಾನಂ ತೀರ್ಥಂಗಳ್ಗಮಲ ಪರಿಧಾನಂ ತ್ರಿಜಗಕೆ ॥
ದ್ವಿಧಾಜಾತಜ್ಞಾನಕ್ಕುಪಶಮನಮಜ್ಞಾನಕುಲಿಶಂ[24] ।
[25]ಸುಧೇ ನಿನ್ನ ಶ್ರೀದಃ ಯಿತನು ತರಿಗೆಮ್ಮಾರ್ತಿಯನು ತಾಂ । ೧೮
ಧನೋನ್ಮತ್ತೋರ್ವೀಪಾಲಕರಿದಿರೊಳೋಡೋಡಿ ಪೊಸತಂ[26]– ।
ಬನೇಕ ಕ್ಲೇಶಂಗಳ್ಗೆಡೆಯುಹೆನು ಮತ್ತಂ ಸ್ವಹಿತವುಂ ॥
[27]ವಿನಷ್ಟಂ ಪಾಳ್ಗೆಯ್ದಂ ಓಟವಿದು ಮಹಾದೋಷಮೆನಿಕುಂ ।
ವಿನೀತೆ ನಿನ್ನಂತಃಕರಣವನು ನಾನಿನ್ನು ತೊರೆಯೆಂ ॥ ೧೯ ॥
ಸಮೀರಂ ಸೋಸಲ್ ನೀಂ ಪುಳುಕಿಸೆ[28] ಸರೋಜಂಗಳೆನಪಂ ।
ಸಿಮಿರ್ಚಿರ್ಲ್ಪಾ ಪೂದೂಳಿರಗಿದೊಡೆ ಕೆಂಪೇರಿ ಮಿಸುಪಾ ॥
ಪ್ರಮಾರ್ಜದ್ದೇವಸ್ತ್ರೀ ಕುಚಭರದ ಗಂಧಾಗರುದಿದುರ್ಗಂ ।
[29]ಸುಮಾಲಿನ್ಯಂಗೊಂಡೀ ಜಲಮುರಿಯಲೆನ್ನಾತ್ಮಮಲಂ[30] । ೨೦
ಸಮುತ್ಪತ್ತಿ ಶ್ರೀಕಾಂತನ ಪದವನೇಜಾಮಲನಖಂ ।
[31]ಸುಮಾಸ್ತ್ರಾರೀಶಂ ನೆಯ್ದೊಗೆದ ಜಡೆ ನೀನಿರ್ಪ ಭವನಂ ॥

---

23. ಅಷ್ಟಿಷ್ಟು ಅಂದರೆ ಕ್ಷುಲ್ಲಕವಾದ. 24. ವಜ್ರಾಯು
25. ಅಮೃತೋಪಮಳೇ ನಿನ್ನ ಶುಭಕರವಾದ ಶರೀರವು (ನೀರು) ನ
ದುಃಖವನ್ನು ನಾಶಪಡಿಸಲಿ. 26. ಎಷ್ಟೋ ಹೊಸ ಹೊಸ ದುಃಖಗ
ತುತ್ತಾದೆನು. 27. ಹಾಳಾದ ನಾನು ನನ್ನ ಕಲ್ಯಾಣವನ್ನು ಹಾಳಗ
ದೆನು. 28. ರೋಮಾಂಚವೆದ್ದಂತೆ ನಿನ್ನ ತೆರೆಗಳು ಏಳುತ್ತಿರಲ
29. ಶುಭಕರವಾದ ಮಲಿನತೆಯನ್ನು. 30. ಉರಳನ್ನು. 31. ಈ

ಪ್ರಮದಂ ಸಾರಂ ಶತ್ರುದಮನಿ ಬಲಸಿನ್ನಾರಣಶಕ್ತಿಯೊಳ್ ।
ಸಾಮಸಾನ್ಯೋಳಿಗಿದರ್ ಮೆರೆಯುವಿಕಂದೇಕಾಮಿಬುಂಬ ಶಾಂ ॥ ೩೧ ॥
ನಗದ್ವಾರಂ[33] ಬಂದಾ ನದಿಗಳೊಳ್ಸಿಕ್ತ್ಯ ಶಿವಜಟಾ— ।
ನಘಸ್ರಾದೇಶಗಳ್ಗೆ[34] ಸಕವಕವಿಸ್ಸೇಸು ಹರಿಯಾ ॥
ದೃಗಸ್ರಾಪ್ಸ್ಯಂ[35] ಪಾದಾಬ್ಜಾನನಿ ಗಡ ಪೇಳ್ವಾ ತ್ರಿಲೋಕಿಪ್ರಸ್ತೈ ।
ಜಗನ್ಮಾತ್ರೇ ಪಿಸ್ವಂ ನುತಿಪರದಕೆಂದೇ ಸುಕವಿಗಳ್ ॥ ೩೨ ॥
ನವಾಫಸ್ಥಂ ಬ್ರಹ್ಮಂ ಶಪವನೊದರುಕ್ತಿರ್ಕೆ ಹರಿಯುಂ ।
ಸವಾನಂದಾತ್ಮಂ ಶಿವಂ ಪವದಿಸುಗೆ ಸಾಂಬಂ ಕೊಣಕುಗೆ[36] ॥
ಘ್ರವಂ ಸ್ರಾಯುಕ್ತಿತ್ವಂ ಯುವುಯುಜನ ದಾನಂಗಳ್ವು ಸಾ— ।
ಕವೋಘಂ ನವಾನ್ಮಾಕಾಲನ ನಿಂಪಳ್ಯಿಂ[37] ಬಳಿಗಿರಲ್ ॥ ೩೩ ॥
ಅಸಾಧಂ ಪ್ರೇಮಾಲು ಸ್ಮಿತಶರಿತಂ ಪ್ರಾಗತಿಯೇ ।
ಅರ್ಥಗಂ[38] ವಿಶ್ವೋದ್ಧಾರಳಿ ಬಳಲಿದಂ ವೈದ್ಯರಸಿ ॥
ಗವಂ ನಾಂ ಬಾಯುವಾರದ ರಥಕನು ಓಯಾವಸನಿಧಿಯೇ ।
ನಿಬಿಯುಂ[39] ಬಂದೊ ಬಿಂ ಪೊರಿಪ್ರದಮ ನಲ್ಗಿಂ ಬವಣಿಬಿಂ ॥ ೩೪ ॥
ಬಹಂಗೇಹಂಬಿಸ್ಟ್ರೆರಕಪ್ರುದು[40] ಜವನ ದೇಸಾಬರಬಿಯು ವು— ।
ತಿಸ್ಯಹಂ[41] ಪೊವಮರ್ದರ್ ಪಿಡಿಸಿಲಸಿಸ್ನಾರನರಸಲ್ ॥

---

32. ಕಾಪಕರಣ ಮಾಡುವುದರಲ್ಲಿ. 33. ಹಿಮಗತದಿಂದ. 34. ಜೊಪಣವಾಗಿರುವುವು. 35. ನೋಡಲಿಕ್ಕೆ ದೊರೆಯದ. 36. ಕುಂಠ ಯುಳ. 37. ಶಿಬ್ಬಿಗೊಳ್ಳುವವಳು. 38. ಪುರುಷಾರ್ಥಗಳಿತನು. 39. ಕಮಲಕ್ಕೆ ಬಂದಿರುವನು. 40. ಕ್ಷೀಣವಾಗುತ್ತ ಬರುವುದು. 41. ಕೂಡಲೇ ಬಿಡಿಸುವವನ್ನು ಹುಡುಕಲಿಕ್ಕೆ ಬೇರೆ ಕಡೆಗೆ ಯುವುದ ದೂತರು ಹೊಪರು.

[42]ದುಡುಂಕುತ್ತುಂ [43]ಬರ್ದಿಲ್ಪತದಿ ನಡೆ[44]ವಾಡಂಗಳಿವೆ ನೀಂ ।
[45]ಕಡಂಗೀ ಲೋಕಕ್ಕೈದಿರಲು ಸರಸಾಯ್ತೀ ಪೊಸತೆರಂ ॥ ೨೫ ॥
[46]ಅಳುವಾರ್ಗರುಂ ಕೀಳ್ಗೆಯ್ತ್ತದ ಪಗೆಗಳಿಂ ಪೊತ್ತಿದುರಿಯಿಂ ।
ತೊಳಲ್ವುಂ ಬೆಂಡಾದೀಯೊಡಲ ಪರಿತಾಪಂಗಳಳವಂ ॥
[47]ಪಳಂಚಾಡಲ್ವೇಳ್ಕುಂ ಸುರನದಿಯೆ ನಿನ್ನುರ್ಕುವ ಜಲಂ ।
ವಿಲಾಸೋಲ್ಲಾಸಂ ವಾಯುಚಲಿಪಲೆಯುಂ ನೀರ್ಕಣಗಳುಂ ॥ ೨೬ ॥
ಇದೇ ಈ ಬ್ರಹ್ಮಾಂಡಂ ಸಕಲ ಜಗದಾ ಭೋಗ ದೆಡೆಯಿ- ।
ರ್ದದೇ ಈ ನಿನ್ನೊಳ್[48]ತಿಂದುಕದ ತೆರನೀಗುಂ ಲುಠಿಪುದೆಂ- ॥
ಬುದಾರಶ್ರೀಯುಂ ಸಲ್ಗ ಮೆನೆ ಶಿವ ನಾನಂತ ಜಟೆಯೊಳ್ ।
ಸದಾ ಭೋಭೋರ್ಗರೆಂಬೀ ಜಲ[49]ಮುಳ್ಪು*ಗೆಯೀಮೂಱುರಿಗಳಂ ॥ ೨೭ ॥
ಅಹೋ ಕಷ್ಟಂ ನಾಣ್ಚುತ್ತಿಹವಖಿಲ ತೀರ್ಥಂಗಳೆನಗೀ ।
[50]ಬೃಹದ್ದೋಷಂಗುದ್ಧಾರಮನೆಸಗಲೇನೆಂಬೆ ಜಗದೊಳ್ ॥
ಮಹೇಶ ಪ್ರಾಮುಖ್ಯರ್ [51]ಕೊಡಕೆಯೊಳು ಕೆಯ್ವೊಯ್ವರಿವನಂ ।
ಸಹಾಸ್ಯಂ ನಿಷ್ಪಾ[52]ಪಂನೆಗಳ್ದ*ಘಹರರ್ಗಗ್ಗನುಸಿರಾ ॥ ೨೮ ॥
[53]ಶ್ವಪಾಕ ವ್ರಾತಂಗಳ್ ಪರಿಪರಿಯೊಳಂ ನೋಡಿ ಜರೆದಾ ।
[54]ವಿಪಾಕೈನಂಗಳ್ಗೋರ್ವನೆಯೆನಿಸಿ ಬಾಳ್ವಂ ದುರುಳನೀ ॥

---

42. ದಟ್ಟವಾಗಿ. 43. ಸ್ವರ್ಗದ ದಾರಿ. 44. ವಿಮಾನ
45. ಪ್ರೇಮದಿಂದ. 46. ಹಬ್ಬಿಕೊಂಡ ಕಾಮಾದಿ ಷಡ್ರಿಪುಗಳಿಂದ
47. ಹೊಡೆದು ಹಾಕಲಿಕ್ಕೆ ಬೇಕು. 48. ಒಂದು ತರದ ಕಾಯಿ
49. ಶಾಂತ ಮಾಡಲಿ. 50. ಮಹಾಪಾಪಿಯಾದ ನನಗೆ. 51. ಕಿವಿ
52. ನಿಷ್ಪಾಪನನ್ನು ಮಾಡಿ ಪಾಪವನ್ನು ತೊಳೆಯುಬಲ್ಲ ದೇವರಿಗೆಲ್ಲ ನಾಚಿ
ಬರುವಂತೆ ಮಾಡಿ ಮಾತಾಡಿ ತೋರಿಸು. 53. ಚಾಂಡಾಲರ ಸಮೂ
ಗಳು. 54. ಪಾಪಾದಿಗಳಿಗೆಲ್ಲ ಆಶ್ರಯನೆನಿಸಿದ.

ವಿಪನ್ನಂಗುದ್ಧಾರಂ ಬಗೆಯಲುಡೆ ಕಟ್ಟೆರ್ದ ಕತದಿಂ ।
ಪ್ರಪೂರ್ಣಂ ನಿನ್ನಾರ್ಪುಂ[55] ಪೊಗಳಲದನೇಂ ಗಾಂಪನಳವೇ[56] ॥ ೨೯ ॥

ಪೊದಲ್ಗೊಂಡಿನ್ನುಂ ನಾಂ ದುರಿತ ಕೃತಿಯಂ ಕಾಣೆನವನಂ ।
ಪೊದಳ್ದಿತ್ತುತ್ತಂ ಲೋಗವಸರದಿ ಸೂಂಕೆಂ[57] ಬೆಗಡಿನೊಳ್ ॥
ಇದೇಂ ದೈವಂ ಪೇಳೆಂದುಳಿದ ಪಸಮಿನ್ನುಂ[58] ಬಿಡದಿರ್ದೈ- ।
ದಿದಂ ನೀಚಂ ಪಾಳ್ದೇಸಿಗನಿವಗೆ ಕೂರ್ಪಂ[59] ಸಿರವಿಸೇ ॥ ೩೦ ॥

ಸ್ವವೃತ್ತಿಪ್ರೇಮಂ[60] ಮೇಣುರದೆ ತೊದಳನ್ನಾಡುವೆರಕಂ[60] ।
ಸುವಿಜ್ಞಾನಂ[61] ಕೀಳ್ಪೆರ್ವರ್ದರೊಳನಿಶಂ ಚಾಡಿಗಳಪುಂ[61] ॥
ಇವೆಲ್ಲಂ ಕೇಳೆನ್ನಾಟಮಿವಿನಿತು[62] ಮಲ್ಲುಂಟೆನಿತೊ ಕಾಣ್ ।
ತವತಾರ್ಯಯೋ[63] ನೀನಲ್ಲದೆ ಪೊಗವನಾರ್ನೋರ್ಪರೆನತಂ ॥ ೩೧ ॥

ಮನೋಜ್ಞಾಪೂರಂ[64] ತಾನೆಸಿಸಣಿಯುರೂಪಂ[64] ತಣಿಸು ಪೀ- ।
ರನಾತಂಗಿರ್ದೇಂ ಕಣ್ಣೆನಿತುಮುದು ತೋರಾದೊಡಮೆಯೇಂ[65] ॥
ಪೊಸಲ್ಮೀರಿಂಬಾಗೇಳಿಪ ತೆರೆಯ ಚೆನ್ನಾಟದುಲಿಯೂ ।
ಽನಿತ್ತುಂ ಕೇಳ್ದಿಲ್ಲಾನರರಗಿದು ಸಿಗ್ಗಲ್ತೆ[66] ಸುಭಗೆ ॥ ೩೨ ॥

---

55. ಸಾಮರ್ಥ್ಯ. 56. ಮೂಢ. 57. ಆಶ್ಚರ್ಯಚಕಿತನಾಗುಂತ ಮಾಡದಾಗಿರುವೆನು. 58. ಅಪೇಕ್ಷೆ. 59. ಪ್ರೇಮವನ್ನು ಕೊಡು. 60. ಸೇವೆಯ ಪ್ರೀತಿ...... ಸುಳ್ಳು ಮಾತಿನ ಪ್ರೀತಿ 61. ಕುವಿಚಾರ....... ಚಾಡಿಯ ಮಾತು. 62. ಇಷ್ಟೇ ಅಲ್ಲದೆ ಇನ್ನೂ ಎಷ್ಟೋ ಉಂಟು. 63. ಮಹಾಮಾತೆ. 64. ಒಳ್ಳೇ ಮನೋಹರವಾದ...... ಬಲಿಷ್ಠವಾದ ರೂಪವನ್ನು. 65. ದೊಡ್ಡದಾದರೇನು ಫಲ. 66. ನಾಚಿಕೆ.

ಅಗೋ [67]ಗೋವಂ ತವ್ಮಿಕ್ಷ್ಮೈಯಲಿ ಪುಗುವಸ್ವರ್ಗಂ[67]ವಿಮಾನದೊಳಂ ।
ಸೊಗಂತಾಳ್ದಿಂತೋಸ್ಸೈಪಿಗರು ಮಿಗಿಲಾಗಿತ್ತು ನಿರಯಂ[68] ॥
ಪುಗುತ್ತಿರ್ಪಸ್ವರ್ಗಸ್ವಾಸ್ಥಿತರಿಳೆಯೊಳೀಯಿತ್ತೈ[69]ರವ ದೇಂ ।
ನಗುತ್ತಂ ನೀನೊತ್ತಾಣದಿ ತರಿಯದಿರ್ಸೆಯುದ್ಧರಿತವಂ ॥ ೩೩ ।

ಪಥಂಗೆಯ್ದುಂ ವಿಪ್ರಾಳಿಯನೆಳಸಿ ಗುರ್ವಂಗನೆಯರಂ[70] ।
ಮದಾಂಧಂ ಕಳ್ಳ[71]ನ್ನೀಂಟುತೆ ಪರರ ಹೊನ್ನಂ ಸೆಳೆಯುತಂ ॥
ಪ್ರಧಾನಂ ಪಾಪಾತ್ಮಂ ಕಡೆ[72]ಯೊಳಿಡೆ ನಿನ್ನೊಳೊಡಲವಂ ।
ಬುಧಶ್ಲಾಘ್ಯಂ ತ್ಯಾಗಪ್ರಣಯಗುಣರಿಂ ಪೋಲ್ಸೊಗಯಿಪಂ, ೩೪

ಅಲಭ್ಯ [73]ಪ್ರಸೂನಂಗಳ ಸುರಭಿಯಂ ಕಳ್ದು ಸುಳಿವಂ ।
ಕೊಲಲ್ಕೊಳ್ವಂ ಬೇಗಂ ವಿರಹಿಗಳನಾ ವಾಯು ಪೆರತೇಂ ॥
[74] ವಿಲೋಲೋದಂಚದ್ವೀಚಿಕಾಲಯುತೆಯುಂಗೂಡುವ್ರಪರಿಂ, ।
ವಿಶೇಶಂವಾಳ್ಪಂ ತ್ರೈಜಗಗಳಘನುಂ ಚೋದ್ಯಮಿದು ತಾಯ್ ॥ ೩೫

ಪಲಂಬರ್ನಿತ್ಯಂ ಲೋಕಪೊಳಿತನಮರ್ವರ್[75] *ಬರ್ದಿಲದಾ– ।
ಶಾಲೀನರ್ ಪೂತಾತ್ಮರ್ ಪೆರರಹುದು ನಾಂ ನಿನ್ನಯ ಕೃಪಾ ।
ವಿಲೋಕಪ್ರಾರಬ್ಧಂ ತೊರೆದೆನೆರಡುಂ ಲೋಗದೆಣೆ[76]ಯಂ ।
ಜಲೋತ್ತುಂಗೇ ಮಾತೇ ನಿಜಮಿದು ಜಗನ್ನಾಥನೆ ಸುಖೀ, ೩

---

67. ಸ್ವರ್ಗವನ್ನು...... ವಿಮಾನದಲ್ಲಿ. 68. ನರಕ. (ಎರಡು ಬಗೆಯು. 70. ಗುರುವಿನ ಹೆಂಡಂದಿರನ್ನು ಅಪೇಕ್ಷಿಸಿ. ಮದಿರೆ. 72. ಕೊನೆಗೆ ನಿನ್ನಲ್ಲಿ ದೇಹವನ್ನು ಇರಿಸಿದರೆ ಅವನು ರಿಂದ ಹೊಗಳಿಸಿಕೊಂಡವನಾಗಿ ತ್ಯಾಗಶೀಲರಿಗಿಂತ ಹೆಚ್ಚಾಗಿ ಆನ ಬಡುವನು. 73. ಫಲಪುಷ್ಪಪಲ್ಲವಗಳ. 74. ಕಳ್ಳನೂ ಕೊ ಕನೂ ಆದ ವಾಯುವು ಮನೋಹರವಾಗಿ ಚಲಿಸುವ ಪ್ರವಾಹವುಳ್ಳ ನ ಕೂಡಲಾಗಿ. 75. ಕೈಕೊಳ್ಳುವರು. 76. ವಿಚಾರವನ್ನು.

ಅಧರ್ಮಿಗೀ ವ್ರಾತ್ಯಂ ನಾಸ್ತಿಕನಧಮ ದುರ್ನೀತರಿವರಂ ।
ಸುಧೀರೆ ಆರ್ಯೈವಳ್ಕರಿನ ನಡೆ ನಿನ್ನೊಳ್ಕಿಡದು ಪೇಣ್ ॥
ಸುಧಾಸಾಮ್ಯೇಎನ್ನೊಳ್ಚರಿತ ತತಿಯಾಟಂ ಕೊರಗದೈ ।
ವಿಧಿಪ್ರಾಪ್ತಂ ಸ್ವಾಭಾವಮೆ ಬಿಡದು ಸ್ಥೈಯೆಂಜೆನಿಳೆಯೊಳ್ ॥೩೭॥
ನಟೇಶಂ ಸಾಯಂಕಾಲದಿ ಕುಣಿವ ಸಂರಂಭದಲಿ ನೀಂ ।
ಜಟಾಜೂಟಾಭೋಗಾಂತರದಿ ತೆರೆಯಿಂ[77] ನರ್ತಿಪನುವೊಳ್ ॥
ಜಟಾಕೂಲಕ್ರೋಡೋಜ್ಜ್ವಲಡಮರುಡಂಕಾರವೊಳಗಲ್ ।
ಬಿಟಂ ನಿನ್ನ ಕ್ರೀಡಾವಿಧಿ ತುಳಿಗೆ ಸಂತಾಪಭರವಂ ।೩೮॥
ನಿರಂತಂ ನಿನ್ನಂ ಕೂಡಿಹುದು ಮಮ ಕಲ್ಯಾಣಮನಿತುಂ ।
ನಿರಾಕಾರಂಗೆಯ್ದೊಂ[78]ದೊಡನೆನಗುಮೀ ದಂದುಗದಿ ಕಾ — ॥
ತರಂ ನಿನ್ನಂ ನಂಬಿ ತ್ರಿಭುವನದೊಳೊರ್ವಂ ಜನನಿಯೇ ।
ನಿರಾಧಾರಂ ನಿನ್ನಾ ಕವಡಳಿವ[79] ಕಾರುಣ್ಯಮಹುದೌ ॥ ೩೯ ॥
ಭವಾನಿ ಶ್ರೀಕಂಠಂಗೊರಗಲವಳಾ ಬೈತಲೆಡೆಯೊಳ್ ।
ಶಿವಂಗ್ರೋಲ್ಲಾಸೇ[80] ನಿನ್ನುರುತರತರಂಗಾಳಿಯುರುಳೆ ॥
ಜಸಂ ನಿನ್ನೊಳ್ ಸಾಪತ್ನ್ಯದಿ ಕೆರಳ್ದು ಕಣ್ಣಿಟ್ಟು ಭವೆ ತಾಂ ।
ಸನರ್ದಳ್ ಕೈಯಿಂದೆಂಬುರುಲಹರಿಗಳ್ ದೇಸೆವಡೆಗೆ[81] ॥ ೪೦ ॥
ಅನೇಕರ್ನಿನ್ನಂ ಸಾರ್ವರಿದಕಹುದೊಂದೇ ಕತವು[82] ಕಾ — ।
ಮನಾ ಸಂಪೂರ್ತರ್ತಾರ್ಣವಹರುಳದೆ ನಿನ್ನಿಂವೆ ಕರುಣೆ ॥
ಮನಂಮುಟ್ಟಂ ಪೇಳ್ವೆಂ ತಳೆದಿಹುದಿದೆನ್ನಾತ್ಮಮರಿಯೌ ।
ಘನಖ್ಯಾತೇ ಪ್ರಟ್ಟುಂಗುಣಮೆನುವವೊಲ್ನಿನ್ನೆರಕಮಂ[83] । ೪೧ ॥

---

77. ತೆರೆಗಳನ್ನೊಡಗೊಂಡು. 78. ಬಿಟ್ಟುಕೊಟ್ಟರೆ. 79. ನಿಷ್ಕಪಟವಾದ. 80. ಶಿವನ ತಲೆಯ ಮೇಲೆ ವಿಲಾಸ ಮಾಡುವವಳೇ. 81. ಶೋಭೆಯನ್ನು ಪಡೆಯಲಿ. 82. ಕಾರಣವು. 83. ಪ್ರೇಮವನ್ನು.

ನರರ್ನಿನ್ನಾ ಮಣ್ಣಂ ಪಣೆಯೊಳಿಡೆ ಸಲ್ಲೀಲೆಯೊಳದೇಂ ।
ಪ್ರರಪಜತ್ ಸೂರ್ಯಂ ಶಾಂ ತಮವಡಗಿಪಂತೈದೆ ನೆಗಳ್ವಂ ॥
ಭರಂ ಬೊಮ್ಮಂ ತೀಡರ್ದಳಿಬರಹಮಂ ಸಾರಿಸುವುದಾ – ।
ದ್ದರಿಂದೆನ್ನೆಲ್ಲಾ ದೋಷವನರಿಗೆ ತನ್ಮೃತ್ತಿಕೆ ವಲಂ ॥ ೪೨ ॥
ಇದೇ ನಮ್ಮೀ ದೇಸಂ ತೊಲಗೆವದನೆಂಬಾ ಜನಗಳಂ ।
ಪೊದಳ್ವಂ ಪೂದೊಂಗಲ್ನೆವದಿ[84] ನೆರೆನಕ್ಕುಕ್ಕುತಲೆಗಂ– ।
ಧದಿಂಮಾಲಿನ್ಯಂ ತಮ್ಮೊಳಿರೆನರರಂ ನಿರ್ಮಲಿನರಂ ।
ಸದಾ ಮಾಳ್ಪಂತಿರ್ಮೀರೆಯ ಮರಗಳಿರ್ಕೆಮ್ಮ ಬಳಗಂ ॥ ೪೩ ॥
ಕೆಲರ್ಬೇಳ್ವರ್[85]ಬರ್ದಿರ್ಪಲ್ಲರಿಗೆ ಕೆಲಬರ್ಸೇವೆಯೆನುವರ್ ।
ಪಲರ್ಯೋಗಾರಕ್ತರ್ಯಮನಿಯಮದಾಭಕ್ತರೆನಿಬರ್ ॥
ಪೊಲಂಬಿಂತುಂ[86] ಬಿಟ್ಟಾಂ ಮನದೆ ತವ ಸಂಕೀರ್ತನರತಂ ।
ವಿಲೋಕಿಪ್ಪೆಂ[87] ಪುಲ್ಲೆಂದಿದೆ ತೊಡಕ ನಾಂ ತಾಯೆ ಸಲಹೌ ॥ ೪೪ ॥
ಅತೀವಾಯಾಸಂಗೊಂಡಿರುವ ವೇಗಂ ಸ್ವೈಪನಿಡಿಸಲ್[88] ।
ಕೃತಾರ್ಥ ಶ್ರೀಯುರ್ಸ್ವೈ ಯೆನಿಸಲಿಹಕೇಸೋ ಸುರವರರ್ ॥
ಗತಾಧಾರರ್ಗೆಂತಾನು[89] ಮೊಳಿತನೆ ಗೆಯ್ದಿಲ್ಲದವರೊಳ್ ।
ಹಿತಂಮಾಳ್ಪರ್ಬೇರಿಲ್ಲಿದು ಪುಸಿಯೆ ನೀನಿಲ್ಲದಿಳೆಯೊಳ್ ॥ ೪೫ ॥
ಜಗಜ್ಜೀವೆ ನಿನ್ನಾಪವ ಕುಡಿದು ಸಿನ್ನೋರೆಯೊಳೆ ನಾ– ।
ವುಗಳ್ಳ್ಮೂರ್ಧರ್ ಮೇಳೈಸಿರಮಿಸಿದೆ ವೈಪತ್ತ್ಯವಿಡದ[90]– ॥

---

84. ಹೂವಿನ ಗುಂಪಿನ ರೂಪದಿಂದ ಚೆನ್ನಾಗಿ ತಿರಸ್ಕಾರ ಮಾಡುವಂತೆ ನಕ್ಕು ಸೊಕ್ಕಿ ತಾವೇ ಮಲಿನಾಂಗವುಳ್ಳವಾದರೂ ಜನರನ್ನು ಪಾಪರಹಿತವಾಗಿ ಮಾಡುವಂತೆ ನಿನ್ನ ಇಬ್ಬದಿಯ ಗಿಡಗಳಿರಲಿ. 85. ಯಜ್ಞಮಾಡುವರು. 86. ಈ ಎಲ್ಲ ಮಾರ್ಗಗಳನ್ನು. 87. ಈ ಸಂಸಾರಲಂಪಟವನ್ನು ಹುಲ್ಲಿನಂತೆ ತುಚ್ಛವೆಂದು ತಿಳಿಯುವೆನು. 88. ಸಂಗ್ರಹಿಸಲಾಗಿ. 89. ಎಷ್ಟಾದರೂ ಪುಣ್ಯವನ್ನು ಮಾಡದಿದ್ದವರು. 90. ಒಂದೇ ಸಮವಾಗಿ.

ಪ್ರಗಣ್ಯೇ ನಿನ್ನುತ್ಸಂಗದೊಳನಿಲ ಶ್ರೈತ್ಯಾನ್ವಿತಿದೊಳಾ- ।
ವಗಂ ಕಾರುಣ್ಯಾಧಾರಳೆ ಮಲಗಿಸೆನ್ನಂ ಜೆಸಸಿಯುಂ ॥ ೪೬ ॥
ಕರಂಕಟ್ಟಾ ನಿನ್ನಾ ಚೆಲುವ ನಡುವಂ ನೆಟ್ಟನೆ ಜಟಾ ।
ಕಿರೀಟಾಂತರ್ವರ್ತಂ ಶಿಶುಶಶಿಯು ಚೆನ್ನಾಗಿ ಬಿಗಿಯಲಾ ॥
ನಿರಂತಂ ನೀಂ ತಾತ್ಸಾರವನೆಳಿಸು[91] ಸಾಧಾರಣರೊಳೀ ।
ನರಂ ತಾನಲ್ಲೀರ್ವಾ ಕರುಣಿಸು ಜಗನ್ನಾಥನವನಂ ॥ ೪೭ ॥
ಜಯೇಂದು[92] ಪ್ರಾಕಾಶೇ ಶಶಿಶಕಲ ಭಾಸ್ವನ್ಮುಕುಟಸೀ ।
[93] ಭಯಾಂತಾಂಭೋಜಾತೇಷ್ಟವರ ಘಟಸಂಶೋಭಿತಕರೇ ॥
[94] ಪಯಃ ಪೀಯೂಷಾಸಾರಸರಣಿ ಸುಲೀಖಾವಸನನೈ ।
ಮಯೀ ನಿನ್ನಂ ಚಿಂತಿಸ್ಪರಿಗೆ ಕೆಡಕೆಂದುಂ ಬರದು ಕೇಳ್ ॥ ೪೮ ॥
ಮುಗುಳ್ನಗೆಯನುಣ್ಮುವಾನನದ ಕಾಂತಿಪೀಯೂಷದಿಂ ।
ಭುಗಿಟ್ಟು ಭವಕಿಚ್ಚಿನೊಳ್ಸುಡುವರಂ ಬಲಂಗೆಯ್ಪಳೇ[95] ॥
[96] ಬೆಗುರ್ವಡೆದ ಚಿನ್ಮಯೇಂದು ರುಚಿರಾಂಚಿತಾಂಗಾಂಗನೇ ।
ಅಘಾರಿಯೆನಗೊಳ್ಪಿತಂಕುಡೆಲೆ ಗಂಗೆ ಸನ್ಮಂಗಳೆ ॥ ೪೯ ॥
ದೇವವ್ರಾತಭಯಂ ಜಿತೌಷಧಬಲಂ ಮಂತ್ರಂಗಳಾಘಾತಕಂ ।
[97] ಸಂವೀತಾಮೃತಜೀವಿತಂ ಮರಕತಗ್ರಾವಾದಿದುರ್ವಾರಿತಂ ॥
[98] ಭಾವಜ್ವಾಲೆಯ ಘೋರತಾಪವಿದರಿಂ ದೂರೈಸೆ[99]ಯೆನ್ನಂಜನಂ ।
ನೀಂ ವೈಕುಂಠನ ಪಾದಮಂತೊಳೆವಳೇ ಸ್ವರ್ಲೋಕಕಲ್ಲೋಲಿನಿ ೫೦॥

---

91. ಹೋಗಲಾಡಿಸು 92. ಬಳೆಯುತ್ತಿರುವ ಚಂದ್ರ. 93. ಅಭಯ, ಕಮಲ, ವರ, ಘಟ. 94. ಅಮೃತದಂತಿರುವ ನೀರಿನ ಪ್ರವಾಹದ ತೆರೆಗಳ ಸುಂದರ ವಸ್ತ್ರದ ಕಾಂತಿಯುಳ್ಳವಳೇ. 95. ಬಲಿಷ್ಠರನ್ನಾಗಿ ಮಾಡುವವಳೇ. 96. ಆಶ್ಚರ್ಯಯುಕ್ತನಾಗಿ ಚಿನ್ಮಯ ಚಂದ್ರನ ಸೌಂದರ್ಯಶೋಭಿತಳಾದವಳೇ. 67. ಅಮೃತದ ಸ್ವಾರಸ್ಯವನ್ನು ಸೆಳೆದುಕೊಂಡುದು. 98. ಸಂಸ್ಕಾರಕ್ಕೆ ಸಂಬಂಧಪಟ್ಟ. 99. ದೂರ ಇರಿಸು.

ಎನ್ನೊಳಿನ್ನೀತಂ[100] ದ್ವಿಪೇಂದ್ರತ್ವಚಮನನು ಚರಶ್ರೇಣಿ ನಂದಿ
ದುಮಂ
ತ್ರಿನ್ನೇವೆಳ್ವಂ ಶಿವಂ ತನ್ನನೆ ಪಣವಿಡುವಂ ತಂಗಿಯೆನ್ನುತ್ತೆನಿ
ಮುನ್ನಂ ಶರ್ವಾಣಿ[101] ಸಾರ್ಥಂ ನಿರುಕಿಸೆ ಮೃದುಲ ಸ್ಮೇರಮು
ದೋರಿಸ
ನಿನ್ನೊಳ್ಚೆಲ್ವೆತ್ತು ಹಾರುತ್ತಿಹ ಲಹರಿಗಳಾ ತಾಂಡವಂ ನೇಪು
ಗೆಯ್ಗೆ[102] ॥

ಸ್ಮರಾರಿಶೀರ್ಷಕ್ಕೆ ವಿಭೂಷಣಳ್ ಸಂಸಾರಾರ್ತಿಸರ್ವಕ್ಕೆ ವಿ
ಶೂ
ಸುರಮ್ಯವಾದಾ ಶುಭವೀಚಿಸಂಖ್ಯೆಳ್ ಸಂರಕ್ಷಿಸೆನ್ನಂ ಸೃತಿ
ಪಂಕದಿಂ ನೀಂ ।

ಇದಂ ಪೀಯೂಷದಲೆಯುಂ ಜಗನ್ನಾಥಂ ನೆಗದ್ದುದಂ ॥
ಓದುವರ್ಗಾವಗುಂ ಸತ್ಯ ಬರ್ಪುದೈ ಸುಖಸಂಪದಂ ॥ ೫

ಸಮಾಪ್ತ.

100. ತನ್ನ ಸೊತ್ತನ್ನೆಲ್ಲ ಸೋತನು, ಇ. 101. ಪಾ
102. ಒಳಿತು ಮಾಡಲಿ.

ಒಪ್ಪೋಲೆ.

ಪುಟ.	ಪದ್ಯ.	ಚರಣ.	
೧	೧	೬	ಗೊಂಡುದದು.
೩	೧	೧	ಚೆಲುವಾದ.
೭		೩ ನೆಯ ಸಾಲು	ಹೆಣ್ಣು.
೮	೬	೨	ಗುಡುಹಂ.
೧೦	ಟೀಕೆ		ಆಹುತಿ.
೧೮	೨೨	೧	ವಣ್ಣಳಸ್ಸು.
"	೨೩	೨	ಸುಗಂಧ.
೩೭	೨೬	೨	ತುಟಿ.
೪೦	೪೫	೨	ಸುಟ್ಟು.
"	೪೭	೬	ಪಿರಿದು.
೪೭	೫	೬	ಮೇಳೈಸಿತೇಗೆ.
೫೨	೧೭	೪	ಕ್ರೀಷ್ಮ.
೫೬	೧	೩	ಕುಮಾರಕಂಗೆ.
"	೨	೧	ನೇರಿದುದ.
೬೦	೧	೪	ಯುಳುಭಮಂ.
೬೧	೪	೨	ಹಾಯ್ದ.
೬೨	೮	"	ಮುರಿತ.
೭೨	೨೩	೯	ನೆಗಳ್ದುದಂ.
"			ಸತ್ಯಂ.

ಾಲಯ

್ಯಾಲಯ - ಹಂಪಿ

್ಯಾರಣ್ಯ